# ಜನತಾವಾಣಿ


ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜನವರಿ 28, 2022

ಸಂಪುಟ : 48 ಸಂಚಿಕೆ : 258 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಮಾ.15-16ಕ್ಕೆ ದುಗ್ಗಮ್ಮನ ಜಾತ್ರೆ

### ಪ್ರತಿ ವರ್ಷದಂತೆ ಈ ವರ್ಷವೂ ಸಂಪ್ರದಾಯಬದ್ಧವಾಗಿ ಆಚರಣೆ: ಎಸ್ಸೆಸ್



ದಾವಣಗೆರೆ, ಜ.27- ನಗರ ದೇವತೆ ಶ್ರೀ ದುರ್ಗಾಂಬಿಕ ದೇವಿ ದೇವಸ್ಥಾನದ ಪ್ರಸಾದ ನಿಲಯದಲ್ಲಿ ಗುರುವಾರ ನಡೆದ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾರ್ಚ್ 15 ಮತ್ತು 16 ರಂದು ಜಾತ್ರೆ ನಡೆಸುವ ಬಗ್ಗೆ ದಿನಾಂಕ ನಿಗದಿ ಮಾಡಲಾಯಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಪುರೋಹಿತ ನಾಗರಾಜ್ ಜೋಯಿಸ್ ಮಾತನಾಡಿ, 8 ರಂದು ಹಂದರ ಕಂಬ ಪೂಜೆ ಹಾಗೂ ಡಬ್ಬಿ ಗಡಿಗಿ ಹೊರಡಿಸಲಾಗುವುದು, ಮಾ.13 ರಂದು ಪಂಚಾಮೃತ ಅಭಿಷೇಕ, ರಾತ್ರಿ ಕಂಕಣಧಾರಣೆ, ಸಾರು ಹಾಕುವ ಸಂಪ್ರದಾಯ ನಡೆಯಲಿದೆ. ಮಾ. 14 ಮತ್ತು 15 ದೇವಿಗೆ ವಿಶೇಷ ಪೂಜೆ ನಡೆಯಲಿದೆ. ಮಾ. 16 ರಂದು ಚರಗ ಚೆಲ್ಲುವ ಶಾಸ್ತ್ರ ನಡೆಯಲಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಿ, ಕೋವಿಡ್ ನಿಯಮಾವಳಿ ಪ್ರಕಾರ ಯಾವ ರೀತಿ ಹಬ್ಬ ಆಚರಿಸಬೇಕು ಎಂಬುದರ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಗಿದೆ. ಕೊರೊನಾ ಸೋಂಕು ಯಾವಾಗ, ಎಷ್ಟು ಪ್ರಮಾಣದಲ್ಲಿ ಹರಡುತ್ತದೆ ಎಂಬುದು ಗೊತ್ತಾಗುವುದಿಲ್ಲ. ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಅಂಗಡಿಗಳಿಗೆ ಅನುಮತಿ ನೀಡುವುದು, ಏಕಾಏಕಿ ರದ್ದು ಪಡಿಸಿದರೆ ಎಲ್ಲರಿಗೂ ತೊಂದರೆ ಆಗುತ್ತದೆ ಎಂದರು.

ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಮಾತನಾಡಿ, ನಗರ ದೇವತೆ ದುರ್ಗಾಂಬಿಕಾ ದೇವಿ ಜಾತ್ರೆಯನ್ನು ಎಲ್ಲರ ಅಭಿಪ್ರಾಯದಂತೆ ಪ್ರತಿ ಬಾರಿಯಂತೆ ಈ ಬಾರಿಯೂ ಕೂಡ ಸಂಪ್ರದಾಯಬದ್ಧವಾಗಿ ನಡೆಸಲಾಗುವುದು ಎಂದು ಹೇಳಿದರು. ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ದೇವಸ್ಥಾನ ಟ್ರಸ್ಟ್ ಧರ್ಮದರ್ಶಿಗಳೊಂದಿಗೆ ಮತ್ತೊಂದು ಸುತ್ತಿನ ಸಭೆ ನಡೆಸಿ, ಜಾತ್ರೆಯ ರೂಪುರೇಷೆಗಳ ಬಗ್ಗೆ ಚರ್ಚಿಸಲಾಗುವುದು ಎಂದರು. ಕಾರಾ, ಮಂಡಕ್ಕಿ, ಬಳೆ ಮತ್ತಿತರೆ ಅಂಗಡಿಗಳು ಇದ್ದರೇನೆ ಜಾತ್ರೆ ಎನಿಸಿಕೊಳ್ಳುವುದು. ಕಡಿಮೆ ಸಂಖ್ಯೆಯಲ್ಲಿ ಅಂಗಡಿಗಳನ್ನು ತೆರೆಯುವ (2ನೇ ಪುಟಕ್ಕೆ)

#### ಸೋಮವಾರ ಲೆಕ್ಕಪತ್ರ ಮಂಡನೆ

**ದಾವಣಗೆರೆ, ಜ. 27- ಸಭೆ ಆರಂಭದಲ್ಲಿ ಯಶವಂತರಾವ್ ಜಾಧವ್ ಅವರು ದೇವಸ್ಥಾನ ಸಮಿತಿಗೆ ಸಂಬಂಧಿಸಿದ ಜಾಲಿನಗರದ ದುರ್ಗಾಂಬಿಕ ಶಾಲೆ ಬಳಿಯ 32 ಮಳಿಗೆಗಳ ನಿರ್ಮಾಣದ ಗುಣಮಟ್ಟ ಪರೀಕ್ಷೆ ಹಾಗೂ ವ್ಯತ್ಯಾಸವಾಗಿರುವ ಲೆಕ್ಕಪತ್ರ ಮಂಡನೆಯನ್ನು ಸಭೆಯ ಮುಂದಿಡುವಂತೆ ಅಧ್ಯಕ್ಷ ಶಿವಶಂಕರಪ್ಪ ಅವರಲ್ಲಿ ಮನವಿ ಮಾಡಿದರು. ಮಾತಿನ ವಾಗ್ವಾದ ನಡೆದ ನಂತರ ಪ್ರತಿಕ್ರಿಯಿಸಿದ ಎಸ್ಸೆಸ್, ಲೆಕ್ಕಪತ್ರ ಮತ್ತು ಗುಣಮಟ್ಟದ ಪರೀಕ್ಷೆ ಬಗ್ಗೆ ವರದಿ ಸಿದ್ದವಿದೆ. ಯಾವಾಗ ಬೇಕಾಗದರೂ ನೋಡಬಹುದು ಎಂದರು. ಈ ವೇಳೆ ಸ್ವಲ್ಪ ಗೊಂದಲ ಉಂಟಾಯಿತಾದರೂ, ಸಭೆ ತೀರ್ಮಾನದಂತೆ ಸೋಮವಾರ (ಜ.31) ಗುಣಮಟ್ಟ ಪರೀಕ್ಷೆ ಮತ್ತು ಲೆಕ್ಕಪತ್ರ ಮಂಡನೆಗೆ ದಿನಾಂಕ ನಿಗದಿ ಮಾಡಲಾಯಿತು.**

#### ಸಾಂಪ್ರದಾಯಿಕ ಕುಸ್ತಿ, ಕುರಿ ಕಾಳಗ ಇರಲಿ

**ದಾವಣಗೆರೆ, ಜ.27- ಬಹಳ ವರ್ಷಗಳಿಂದ ನಗರ ದೇವತೆ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವದ ಪ್ರಯುಕ್ತ ನಡೆದುಕೊಂಡು ಬಂದಿರುವ ಕುಸ್ತಿ ಪಂದ್ಯಾವಳಿ ಮತ್ತು ಕುರಿ ಕಾಳಗವನ್ನು ಈ ಬಾರಿಯೂ ಸಹ ಹಮ್ಮಿಕೊಳ್ಳುವಂತೆ ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಸೇರಿದಂತೆ ಅನೇಕರ ಅನಿಸಿಕೆಯಾಗಿತ್ತು.**

## ಮಾರ್ಚ್ ಮೊದಲ ವಾರ ರಾಜ್ಯ ಬಜೆಟ್

ಬೆಂಗಳೂರು, ಜ. 27 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಚೊಚ್ಚಲ ಮುಂಗಡ ಪತ್ರವನ್ನು ಮಾರ್ಚ್ ಮೊದಲ ವಾರ ಮಂಡಿಸಲಿದ್ದಾರೆ.

ಸಂಪುಟ ಸಭೆಯ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಮುಖ್ಯಮಂತ್ರಿಯವರು, ರಾಜ್ಯ ವಿಧಾನಸಭಾ ಅಧಿವೇಶನವನ್ನು ಫೆಬ್ರವರಿ 14 ರಿಂದ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದರು.

ಮಾರ್ಚ್ ಮೊದಲ ವಾರ ಬಜೆಟ್ ಮಂಡನೆಯಾಗಲಿದೆ. ಇದಕ್ಕೂ ಮುನ್ನ ಸರ್ಕಾರದಲ್ಲಿ ಬದಲಾವಣೆ ಏನಾದರೂ ಮಾಡಬೇಕಿದ್ದರೆ, ವರಿಷ್ಠರ ತೀರ್ಮಾನಕ್ಕೆ ಬಿಟ್ಟಿದ್ದು. ವರಿಷ್ಠರು ದೆಹಲಿಗೆ ಕರೆದರೆ ತೆರಳಿ ಎಲ್ಲ ವಿಷಯಗಳ ಬಗ್ಗೆಯು ಚರ್ಚೆ ಮಾಡುತ್ತೇನೆ ಎಂದರು.

#### ಫೆ.14ರಿಂದ ವಿಧಾನಸಭೆ ಅಧಿವೇಶನ ಆರಂಭ

ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಮುಂದುವರೆಸಬೇಕೆಂಬ ಬೇಡಿಕೆ ಬಂದಿದೆ. ಸಂಪುಟದ ಉಪಸಮಿತಿ ಅನುಮೋದನೆ ನೀಡಿದರೆ, ರೈತರಿಗೆ ಅನುಕೂಲವಾಗುವ ತೀರ್ಮಾನ ಕೈಗೊಳ್ಳಲಾಗುವುದು ಎಂದರು. ನಮ್ಮದು ಸ್ಪಂದನಾಶೀಲ ಸರ್ಕಾರ, ಏನೇ ಸಮಸ್ಯೆಗಳು ಎದುರಾದರೂ ಅದಕ್ಕೆ ಸ್ಪಂದಿಸುತ್ತೇವೆ. ನಾಳೆ ನನ್ನ ಜನ್ಮದಿನ. ಆದರೆ ನಾನು ಎಂದೂ ಹುಟ್ಟಿದ ಹಬ್ಬ ಆಚರಣೆ ಮಾಡಿಕೊಳ್ಳುವುದಿಲ್ಲ. ನಾಳೆಯೇ ಸರ್ಕಾರಕ್ಕೆ ಆರು ತಿಂಗಳು ಕಳೆಯಲಿದೆ ಎಂದವರು ಹೇಳಿದರು.

ಈ ಬಗ್ಗೆ ಒಂದು ಪುಸ್ತಕ ಬಿಡುಗಡೆ ಮಾಡುತ್ತೇವೆ. ಆರು ತಿಂಗಳ ಅವಧಿಯಲ್ಲಿ ಏನೆಲ್ಲ ಕೆಲಸಗಳು ಆಗಿವೆ. ಅವು ಯಾವ ರೀತಿ ಜನ ಉಪಯೋಗಿ ಆಗಿವೆ ಎಂಬುದನ್ನು ಕಿರುಹೊತ್ತಿಗೆಯಲ್ಲಿ ನೀಡಲಾಗಿದೆ. ಕಳೆದ ಆರು ತಿಂಗಳಲ್ಲಿ ದೊಡ್ಡ ಘೋಷಣೆಗಳನ್ನೇನು ಮಾಡಿಲ್ಲ. (2ನೇ ಪುಟಕ್ಕೆ)

## ಕಾಂಗ್ರೆಸ್ ತೊರೆಯುವೆ: ಇಬ್ರಾಹಿಂ

ಬೆಂಗಳೂರು, ಜ 27- ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ಆಪ್ತ ಹಾಗೂ ಹಿರಿಯ ನಾಯಕ ಸಿ.ಎಂ. ಇಬ್ರಾಹಿಂ ಕಾಂಗ್ರೆಸ್ ತೊರೆಯಲಿದ್ದಾರೆ.



ವಿಧಾನಪರಿಷತ್ತಿನ ಪ್ರತಿಪಕ್ಷ ನಾಯಕತ್ವ ಸ್ಥಾನಕ್ಕೆ ಬಿ.ಕೆ. ಹರಿಪ್ರಸಾದ್ ಅವರ ನೇಮಕವಾಗುತ್ತಿದ್ದಂತೆ ಸಿಡಿದೆದ್ದಿರುವ ಇಬ್ರಾಹಿಂ, ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ಗೂ ನನಗೂ ಮುಗಿದ ಅಧ್ಯಾಯ, ಮೂರು ವರ್ಷಗಳ ವಿಧಾನಪರಿಷತ್ ಸ್ಥಾನಕ್ಕೆ (2ನೇ ಪುಟಕ್ಕೆ)

#### ಜೆಡಿಎಸ್‌ಗೆ ಸ್ವಾಗತ

ಬೆಂಗಳೂರು, ಜ. 27 - ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಜೆಡಿಎಸ್ ಪಕ್ಷಕ್ಕೆ ಬಂದರೆ ಸ್ವಾಗತಿಸುವುದಾಗಿ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಇಬ್ರಾಹಿಂ ಅವರಿಗೆ ಇನ್ನೂ ದೇವೇಗೌಡರು ಹಾಗೂ ನಮ್ಮ ಪಕ್ಷದ ಬಗ್ಗೆ ವ್ಯಾಮೋಹ ಇದೆ. ಅವರು ಪಕ್ಷಕ್ಕೆ (3ನೇ ಪುಟಕ್ಕೆ)

## ಬಿಜೆಪಿ ತೊರೆಯುವುದಿಲ್ಲ: ಗೋಪಾಲಯ್ಯ

ಬೆಂಗಳೂರು, ಜ. 27 - ಅಧಿಕಾರ, ಸ್ಥಾನಮಾನ ನೀಡಿದ ಬಿಜೆಪಿ ಪಕ್ಷವನ್ನು ತೊರೆಯುವ ಪ್ರಶ್ನೆಯೇ ಇಲ್ಲ ಎಂದು ಅಬಕಾರಿ ಸಚಿವ ಕೆ. ಗೋಪಾಲಯ್ಯ ಹೇಳಿದ್ದಾರೆ.

ಕಾಂಗ್ರೆಸ್, ಜೆಡಿಎಸ್‌ಗೆ ರಾಜೀನಾಮೆ ಕೊಟ್ಟು 17 ಜನ ಬಿಜೆಪಿಯಿಂದ ಗೆದ್ದು ಶಾಸಕರಾದ ಮೇಲೆ ಪಕ್ಷ ಅಧಿಕಾರ ನೀಡಿದೆ. ಯಡಿಯೂರಪ್ಪ ಅವರು ಮಾತು ಕೊಟ್ಟಂತೆ ನಡೆದುಕೊಂಡಿದ್ದಾರೆ. ಯಾರೂ ಕೂಡ ನಾವು ಪಕ್ಷ ತೊರೆಯುವ ಪ್ರಶ್ನೆಯೇ ಬರುವುದಿಲ್ಲ. ಇಂತಹ ವಿಚಾರದ ಬಗ್ಗೆ ಗೊಂದಲ ಉಂಟು ಮಾಡುವವರೇ ಇದಕ್ಕೆ ಉತ್ತರ ನೀಡಬೇಕು ಎಂದರು.

## ಸಂಬಂಧಿಯಿಂದಲೇ ಬರ್ಬರ ಹತ್ಯೆ

### ಕುಂದುವಾಡ ಕೆರೆ ಬಳಿಯ ಕೊಲೆ ಪ್ರಕರಣದ ಆರೋಪಿ ಬಂಧನ

ದಾವಣಗೆರೆ, ಜ. 28 – ನಗರದ ಕುಂದುವಾಡ ಕೆರೆಯ ಬಳಿ ಹರಿಹರದ ಮಹಮದ್ ಅಲ್ತಾಫ್ ಅವರನ್ನು ಬರ್ಬರವಾಗಿ ಕತ್ತು ಕೊಯ್ದು ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಹತ ವ್ಯಕ್ತಿಯ ಸಂಬಂಧಿ ಇಬ್ರಾಹಿಂ ಎಂಬ ವ್ಯಕ್ತಿಯನ್ನು ಬಂಧಿಸಲಾಗಿದೆ.

ಇಬ್ರಾಹಿಂ ಮದುವೆ ನಿಶ್ಚಯವಾಗಿತ್ತು. ಮದುವೆಯಾಗಬೇಕಿದ್ದ ಹುಡುಗಿಯ ಜೊತೆ ಅಲ್ತಾಫ್ ಸಂಬಂಧದ ಶಂಕೆಯೇ ಈ ಕೊಲೆಗೆ ಕಾರಣ ಎಂದು ಆರೋಪಿಸಲಾಗಿದೆ. ಈ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ.

ಕಳೆದ ಜ.18ರಂದು ನನ್ನ ಮಗ ಅಲ್ತಾಫ್ ಹಾಗೂ ಅಕ್ಕನ ಮಗ ಇಬ್ರಾಹಿಂ ಜೊತೆಯಾಗಿ ಮದುವೆ ಬಟ್ಟೆ ತೆಗೆದುಕೊಳ್ಳಲು ದಾವಣಗೆರೆಗೆ ತೆರಳಿದ್ದರು. ನಂತರ (2ನೇ ಪುಟಕ್ಕೆ)

## ಮೂಲಭೂತ ಸೌಲಭ್ಯ, ಶಾಶ್ವತ ಕುಡಿಯುವ ನೀರು ಸೌಲಭ್ಯ ಕಲ್ಪಿಸಿ

#### ಹರಿಹರ ನಗರಸಭೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರ ಆಗ್ರಹ

ಹರಿಹರ, ಜ.27- ಸಾರ್ವಜನಿಕರಿಂದ ಪಡೆದ ಕಂದಾಯದ ಶೇ. 10 ರಷ್ಟಾದರೂ ಒಳ್ಳೆಯ ಕೆಲಸಕ್ಕೆ ಆದ್ಯತೆ ಕೊಡಿ. ಕನ್ನಡ ಭವನ, ರಂಗ ಮಂದಿರ, ರಾಜ ಕಾಲುವೆ ಸೇರಿದಂತೆ ಇತರೆಡೆ ಮಳಿಗೆ ನಿರ್ಮಾಣ, ಹಂದಿಗಳ ಹಾವಳಿ ನಿಯಂತ್ರಣ, ರಸ್ತೆ, ಚರಂಡಿ, ವಿದ್ಯುತ್ ಲೈಟ್ ಅಳವಡಿಕೆ ಸೇರಿದಂತೆ ಜನರಿಗೆ ದಿನ ನಿತ್ಯವೂ ಬೇಕಾಗುವ ಕೆಲಸಗಳಿಗೆ ಮೊದಲು ಆದ್ಯತೆ...

ಇವು ಹರಿಹರ ನಗರಸಭೆಯ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಕೇಳಿ ಬಂದ ಸಲಹೆಗಳು.

ನಗರಸಭಾಧ್ಯಕ್ಷೆ ರತ್ನ ಡಿ. ಉಜ್ಜೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸಾರ್ವಜನಿಕರು, ಹರಿಹರೇಶ್ವರ ದೇವಾಲಯದಲ್ಲಿ ಮೂಲಭೂತ ಸೌಲಭ್ಯ, ನಾಮಫಲಕ ಅಳವಡಿಕೆ ದ್ವಾರ ಬಾಗಿಲು ಕಮಾನು, ಟ್ರಾಫಿಕ್ ಸುಧಾರಣೆ ತರಲು ವ್ಯವಸ್ಥೆ, ಪಾರ್ಕ್ ಅಭಿವೃದ್ಧಿ, ಶಾಶ್ವತ ಕುಡಿಯುವ ನೀರು ಸೇರಿದಂತೆ ಹಲವಾರು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ.

ರತ್ನ ಉಜ್ಜೇಶ್ ಮಾತನಾಡಿ, ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ನೀಡಿರುವ ಸಲಹೆಗಳನ್ನು ಪರಿಗಣಿಸಿ ಉತ್ತಮ ಬಜೆಟ್ ಮಾಡುವುದಕ್ಕೆ ಆದ್ಯತೆ ಕೊಡಲಾಗುವುದು ಎಂದು ಹೇಳಿದರು. ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ, ನಗರಸಭೆಯ ಸ್ಥಳಗಳಲ್ಲಿ ಮಳಿಗೆಗಳನ್ನು ನಿರ್ಮಾಣ ಮಾಡಿ ಹೆಚ್ಚು ಆದಾಯ ಬರುವಂತೆ (3ನೇ ಪುಟಕ್ಕೆ)

#### ಕಾಂಗ್ರೆಸ್ - ಜೆಡಿಎಸ್ ಸದಸ್ಯರ ಚಕಮಕಿ

ಸಭೆಯಲ್ಲಿ ಬಿಜೆಪಿ ಸದಸ್ಯ ಹನುಮಂತಪ್ಪ ಮಾತನಾಡುವಾಗ ಕಾಂಗ್ರೆಸ್ ಮುಖಂಡ ದಾದಾಪೀರ್ ಭಾನುವಳ್ಳಿ, ಜೆಡಿಎಸ್‌ನ ದಾದಾ ಖಲಂದರ್ ಮತ್ತು ಮನ್ಸೂರ್ ಮದ್ದಿ ಮಧ್ಯದಲ್ಲಿ ಉತ್ತರ ನೀಡುವುದಕ್ಕೆ ಮುಂದಾದರು.

ಇದರಿಂದ ಕುಪಿತರಾದ ಹನುಮಂತಪ್ಪ ನಾನು ಜನರ ಸಮಸ್ಯೆಗಳನ್ನು ಅಧ್ಯಕ್ಷರು ಮತ್ತು ಪೌರಾಯುಕ್ತರ ಗಮನಕ್ಕೆ ತರುತ್ತಿದ್ದೇನೆ. ಅವರು ಉತ್ತರ ಕೊಡುತ್ತಾರೆ, ಅದನ್ನು ಬಿಟ್ಟು ನೀವು ಯಾಕೆ ಕೊಡುತ್ತೀರಾ? ಎಂದು ಹೇಳುತ್ತಿದ್ದರು.ಈ ಮೂವರ ಚಕಮಕಿಯಿಂದ ಸಭೆ ಯಾವ ಕಡೆಯಲ್ಲಿ ಸಾಗುತ್ತದೆ ಎಂಬುದೇ ಅರಿಯದಂತಾಯಿತು.

## ಎಸ್‌ಟಿಪಿಐ ಕೇಂದ್ರ ಏಪ್ರಿಲ್ ವೇಳೆಗೆ ಸಿದ್ಧ

### ಬೆಂಗಳೂರಿನ ಎಸ್‌ಟಿಪಿಐ ಹಿರಿಯ ನಿರ್ದೇಶಕ ಶೈಲೇಂದ್ರ ತ್ಯಾಗಿ ವಿಶ್ವಾಸ



**ಸಂಸದ ಜಿ.ಎಂ. ಸಿದ್ದೇಶ್ವರ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಎಸ್.ಟಿ.ಪಿ.ಐ. ಉಪ ಕೇಂದ್ರ ಸ್ಥಾಪನೆ ಸಿದ್ಧತೆ ಪರಿಶೀಲಿಸಲು ತೆರಳಲಿಲ್ಲ. ಆದರೆ, ಜಿಎಂಐಟಿ ಅತಿಥಿ ಗೃಹದಲ್ಲಿ ಅಧಿಕಾರಿಗಳೊಂದಿಗೆ ಮಾತನಾಡಿ ಮಾಹಿತಿ ಪಡೆದುಕೊಂಡರು. ಎಸ್‌ಟಿಪಿಐ ಕೇಂದ್ರ ಸ್ಥಾಪನೆಗೆ ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.**

ದಾವಣಗೆರೆ, ನ. 27 - ನವೋದ್ಯಮಿಗಳು ಹಾಗೂ ಸಣ್ಣ ಉದ್ಯಮಿಗಳಿಗೆ ನೆರವಾಗುವ ಮೂಲಕ ದಾವಣಗೆರೆಯನ್ನು ಐ.ಟಿ. ಕಂಪನಿಗಳ ಕೇಂದ್ರ ಮಾಡಲು ನೆರವಾಗುವ ಎಸ್‌ಟಿಪಿಐ (ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ) ಉಪಕೇಂದ್ರ ಬರುವ ಏಪ್ರಿಲ್‌ನಲ್ಲಿ ಉದ್ಘಾಟನೆಯಾಗಲಿದೆ ಎಂದು ಬೆಂಗಳೂರಿನ ಎಸ್‌ಟಿಪಿಐ ಹಿರಿಯ ನಿರ್ದೇಶಕ ಶೈಲೇಂದ್ರ ತ್ಯಾಗಿ ತಿಳಿಸಿದ್ದಾರೆ.

ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಎಸ್‌ಟಿಪಿಐ ಉಪಕೇಂದ್ರ ಸ್ಥಾಪಿಸಲು ಜಾಗ ನೀಡಲಾಗಿದೆ. ಇಲ್ಲಿಗೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದ ನಂತರ ಅವರು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದರು.

ಮೈಸೂರು, ಮಂಗಳೂರು ಹಾಗೂ ಹುಬ್ಬಳ್ಳಿಗಳ ನಂತರ ದಾವಣಗೆರೆಯಲ್ಲಿ ನಾಲ್ಕನೇ ಉಪ ಕೇಂದ್ರ ಸ್ಥಾಪನೆಯಾಗುತ್ತಿದೆ. ಈ ಕೇಂದ್ರಕ್ಕೆ ಎಸ್‌ಟಿಪಿಐ ಮೂಲಕ 2.62 ಕೋಟಿ ರೂ.ಗಳ ವೆಚ್ಚ ಮಾಡಲಾಗುತ್ತಿದೆ ಎಂದವರು ತಿಳಿಸಿದ್ದಾರೆ.

102 ಸೀಟುಗಳ ಪ್ಲಗ್ ಅಂಡ್ ಪ್ಲೇ ಕೇಂದ್ರ, ಉನ್ನತ ವೇಗದ ಅಂತರ್ಜಾಲ ಸೌಲಭ್ಯ, ಸಮಾವೇಶ ಕೊಠಡಿ ಸೇರಿದಂತೆ ಹಲವು ಸೌಲಭ್ಯಗಳು ಈ (2ನೇ ಪುಟಕ್ಕೆ)

## ಧ್ವಜ ಇಳಿಸುವ ವೇಳೆ ವಿದ್ಯುತ್ ತಗುಲಿ ಬಾಲಕಿ ಸಾವು

ಮಹಸಮುಂಡ್, ಜ. 27- ಗಣರಾಜ್ಯೋತ್ಸವ ಸಂದರ್ಭದಲ್ಲಿ ಹಾರಿಸಿದ್ದ ರಾಷ್ಟ್ರಧ್ವಜ ಇಳಿಸಲು ತೆರಳಿದ ಸಂದರ್ಭದಲ್ಲಿ ಕಂಬಕ್ಕೆ ವಿದ್ಯುತ್ ತಂತಿ ತಗುಲಿ 14 ವರ್ಷದ ಬಾಲಕಿ ಮೃತಪಟ್ಟ ಹಾಗೂ ಇನ್ನೊಬ್ಬ ಬಾಲಕಿಗೆ ತೀವ್ರ ಗಾಯಗಳಾದ ಘಟನೆ ಛತ್ತೀಸ್‌ಘಡದ ಮಹಸಮುಂಡ್ ಜಿಲ್ಲೆಯಲ್ಲಿ ನಡೆದಿದೆ. ಬುಡಕಟ್ಟು (2ನೇ ಪುಟಕ್ಕೆ)

## ಲೈಂಗಿಕ ಪೀಡನೆಯ ಹುಸಿ ದೂರುಗಳಿಗೆ ಹೈಕೋರ್ಟ್ ಅಸಮಾಧಾನ

ನವದೆಹಲಿ, ಜ. 27 – ಇಲ್ಲ ಸಲ್ಲದ ಕಾರಣಗಳ ನೆಪ ಮಾಡಿಕೊಂಡು ಲೈಂಗಿಕ ಪೀಡನೆಯ ಹುಸಿ ದೂರುಗಳನ್ನು ದಾಖಲಿಸುತ್ತಿರುವ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿರುವ ದೆಹಲಿ ಹೈಕೋರ್ಟ್, ಲೈಂಗಿಕ ಪೀಡನೆ ಪ್ರಕರಣಗಳನ್ನು ಈ ರೀತಿಯ ಸಣ್ಣತನಕ್ಕೆ ಇಳಿಸುವುದರಿಂದ ಮಹಿಳಾ ಸಬಲೀಕರಣಕ್ಕೆ ಧಕ್ಕೆಯಾಗುತ್ತದೆ ಎಂದು ಹೇಳಿದೆ. ನ್ಯಾಯಮೂರ್ತಿ ಸುಬ್ರಮಣ್ಯಂ ಪ್ರಸಾದ್ ಅವರು ಲೈಂಗಿಕ ಪೀಡನೆ ಪ್ರಕರಣವೊಂದರ ವಿಚಾರಣೆ (3ನೇ ಪುಟಕ್ಕೆ)


॥ ಶ್ರೀ ಅಣಿವಿ ವೀರಭದ್ರೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ ಶಿವಕುಮಾರಸ್ವಾಮಿ ಬಡಾವಣೆ ಮೊದಲನೇ ಹಂತ, ದುರ್ಗಾಂಬಿಕ ಶಾಲೆ ಹಿಂಭಾಗದ ವಾಸಿಗಳಾದ **ಶ್ರೀ ಸುರೇಶ್ (ಗಾಂಜಿ)** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 24.1.2022ನೇ ಸೋಮವಾರ ಬೆಳಗಿನ ಜಾವ 5 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಎಸ್.ಎಂ. ರುದ್ರಮ್ಮ**

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 28.1.2022ರ ಶುಕ್ರವಾರ ಬೆಳಿಗ್ಗೆ 12.30ಕ್ಕೆ ಶಿವಕುಮಾರ ಸ್ವಾಮಿ ಬಡಾವಣೆ, 1ನೇ ಹಂತ, ದುರ್ಗಾಂಬಿಕ ಹೈಸ್ಕೂಲ್ ಹಿಂಭಾಗದ ಮೃತರ ಸ್ವಗೃಹ ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಸುಧಾ ಶ್ರೀ ಸುರೇಶ್ ಗಾಂಜಿ ಮತ್ತು ಮಕ್ಕಳು,
ಶ್ರೀಮತಿ ಗೀತಾ ಶ್ರೀ ವಿಜಯಕುಮಾರ್ ಬಳ್ಳಾರಿ
ಶ್ರೀಮತಿ ಶಾಂತ ಶ್ರೀ ಜಿ. ಪ್ರಕಾಶ್ ದಾವಣಗೆರೆ ಮತ್ತು ಮಕ್ಕಳು,
ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು..
ಮೊಬೈಲ್ : 94489 66128, 98448 88467

**ಎಂಟನೇ ವರ್ಷದ ಚಿರಸ್ಮರಣೆ**



**ದಿ. ಶ್ರೀ ಸಿ. ಪಾಂಡುರಂಗ**
ಜನನ : 01.07.1942 ನಿಧನ : 28.01.2014

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಬಿ. ವನಜಾಕ್ಷಮ್ಮ
ಮಕ್ಕಳು : ಡಾ. ಎಸ್.ಪಿ. ಮುರುಳೀಧರ
ಎಸ್.ಪಿ. ಶ್ರೀಧರ, ಡಾ. ಎಸ್.ಪಿ. ಮಧು
ಮತ್ತು ಸೊಸೆಯಂದಿರು, ಮೊಮ್ಮಕ್ಕಳು
ಹಾಗೂ ಬಂಧು-ಮಿತ್ರರು.

**SSLC ಮಕ್ಕಳ ಪೋಷಕರ ಗಮನಕ್ಕೆ**

Hard Work ಮಾಡುತ್ತಿದ್ದರೂ Expected Result ದೊರೆಯುತ್ತಿಲ್ಲವೆ ?

ಅವರ ಏಕಾಗ್ರತೆ, ನೆನಪಿನ ಶಕ್ತಿ, Speed Reading, Study Technique ಉತ್ತಮಗೊಳಿಸಲು ಈ ಕೆಳಗಿನ ನಂಬರ್‌ಗೆ ಕರೆಮಾಡಿ ಅಥವಾ QR CODE SCAN ಮಾಡಿ.
ಮೂರು ದಿನದ ತರಬೇತಿ 5000/-
ಮೊದಲು ನೊಂದಾಯಿಸಿದ 10 ವಿದ್ಯಾರ್ಥಿಗಳಿಗೆ 3000/- (ತರಬೇತಿ ಹಾಗೂ ಊಟ-ಉಪಹಾರ ಸೇರಿ)

SSLC ಯಲ್ಲಿ 90% ಗಿಂತ ಹೆಚ್ಚು ಅಂಕಗಳಿಸಲು ನಿಮ್ಮ ಮಗುವನ್ನು ಸಿದ್ಧಗೊಳಿಸಬೇಕೆ ?

ತರಬೇತಿ ದಿನಾಂಕ : ಫೆಬ್ರವರಿ 4,5 ಮತ್ತು 6
ಸಮಯ : ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 8.30

SCAN QR CODE

8073054295

**ಏಳನೇ ವರ್ಷದ ಪುಣ್ಯಸ್ಮರಣೆ**



ಲಿಂ॥ ಹೆಚ್.ಡಿ. ಶೇಖರಪ್ಪನವರು
ನಿವೃತ್ತ ಮುಖ್ಯೋಪಾಧ್ಯಾಯರು, ಅತ್ತಿಗೆರೆ
ಜನನ : 03-09-1945 ನಿಧನ : 28.01.2015

" ಸಾವಿಲ್ಲದ ಮನೆ ಇಲ್ಲ"
" ನೋವಿಲ್ಲದ ಹೃದಯವಿಲ್ಲ"
"ಕಣ್ಣೀರಿಲ್ಲದ ಕಣ್ಣುಗಳಿಲ್ಲ"
" ಕನಸಿಲ್ಲದ ಮನಸಿಲ್ಲ"
"ನಿಮ್ಮ ನೆನಪುಗಳಿಲ್ಲದ ದಿನಗಳಿಲ್ಲ"
ಸದಾ ನಿಮ್ಮ ನೆನಪಿನಲ್ಲಿರುವ...

ಇಂತಿ ದುಃಖತಪ್ತರು :
ಪತ್ನಿ: ಶ್ರೀಮತಿ ಸುನಂದಮ್ಮ
ಹಾಗೂ ಕುಟುಂಬ ವರ್ಗದವರು

# 19 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಪಡೆದ ಸೈನಿಕ



ಹರಪನಹಳ್ಳಿ, ಜ.27- ದೇಶದ ರಕ್ಷಣೆಗಾಗಿ 19 ವರ್ಷಗಳ ಕಾಲ ತಾಯಿ ನಾಡಿಗಾಗಿ ಸೇವೆ ಸಲ್ಲಿಸಿ, ಮರಳಿ ನಮ್ಮ ನಾಡಿಗೆ ಆಗಮಿಸಿದ್ದೇನೆ ಎಂದು ನಿವೃತ್ತ ಸೈನಿಕ ಕೆ. ಹಾಸಿಫ್ ಆಹ್ಮದ್ ಹೇಳಿದರು.

ಪಟ್ಟಣದ ಟೀಚರ್ ಕಾಲೋನಿಯಲ್ಲಿರುವ ಸಾಹಿತಿ ಇಸ್ಮಾಯಿಲ್ ಎಲಿಗಾರ್ ಅವರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ರಕ್ಷಣೆಗಾಗಿ ನಾನು ಎರಡು ದಶಕಗಳ ಕಾಲ ಸೇವೆ ಮಾಡಿದ್ದೇನೆ. ನಾನು ಮೂಲತಃ ಬಾವಿಹಳ್ಳಿ ಗ್ರಾಮದವನಾಗಿದ್ದು, ನಮ್ಮ ತಂದೆ- ತಾಯಿ ಬಡತನದಿಂದ ದಾವಣಗೆರೆಗೆ ಸ್ಥಳಾಂತರಗೊಂಡೆನು. ನಮ್ಮ ತಂದೆ ದಾವಣಗೆರೆ ರೈಸ್ ಮಿಲ್‌ನಲ್ಲಿ ಕೂಲಿ ಕೆಲಸ ಮಾಡಿ ಜೀವನ ಮಾಡುತ್ತಿದ್ದರು. ಇಂತವರ ಮಗನಾಗಿ ನಾನು ದೇಶದ ರಕ್ಷಣೆಗಾಗಿ ಸೇವೆ ಮಾಡಿಕೊಂಡು ಮರಳಿ ತಾಯಿ ನಾಡಿಗೆ ಬಂದಿರುವುದು ನನಗೆ ಸಂತೋಷವಾಗುತ್ತಿದೆ ಎಂದರು.

ನಾನು ದೇಶದ ರಕ್ಷಣೆಗಾಗಿ ದೇಶದ ಅನೇಕ ಗಡಿಭಾಗಗಳಲ್ಲಿ ಸೇವೆ ಸಲ್ಲಿಸಿದ್ದೇನೆ. ಜಮ್ಮು ಮತ್ತು ಕಾಶ್ಮೀರದಲ್ಲಿ 3 ವರ್ಷ, ಅಸ್ಸಾಂ, ದೆಹಲಿಯಲ್ಲಿ 3 ವರ್ಷ ಸೇವೆ, ಮುಂಬಯಿ ತಾಜ್ ಹೋಟೆಲ್ ದುರಂತದ ವೇಳೆಯಲ್ಲಿ ಎನ್.ಎಸ್.ಜಿ. ನ್ಯಾಷನಲ್ ಸೆಕ್ಯೂರಿಟಿ ಗಾರ್ಡ್ ಮತ್ತು ಇನ್‌ಸ್ಪೆಕ್ಟರ್ ಆಗಿ ಸೇವೆ ಸಲ್ಲಿಸಿದ್ದೇನೆ. ದೇಶದ ರಕ್ಷಣೆಗಾಗಿ ನಾನು ಯಾವುದೇ ಕಾರ್ಯಕ್ಕೆ ಅಂಜದೇ ಪ್ರಾಮಾಣಿಕ ಸೇವೆ ಮಾಡಿದ್ದೇನೆ ಎಂದು ಅವರು ತಮ್ಮ ಸೇವೆಯನ್ನು ಮೆಲಕು ಹಾಕಿದರು.

**ಹರಪನಹಳ್ಳಿ**

ಸಾಹಿತಿ ಇಸ್ಮಾಯಿಲ್ ಎಲಿಗಾರ್ ಮಾತನಾಡಿ, ಭಾರತ ದೇಶದಲ್ಲಿ ಹಿಂದೂ, ಮುಸ್ಲಿಂ ಅಲ್ಲದೇ ಭಾರತೀಯರ ಒಟ್ಟು ಹೋರಾಟದ ಪ್ರತಿಫಲವೇ ಸ್ವಾತಂತ್ರ್ಯ ನಮಗೆ ದಕ್ಕಿದ್ದು, ಇದಕ್ಕೆ ಬಹುತ್ವ ಭಾರತವೇ ಸಾಕ್ಷಿ. ಇಲ್ಲಿ ಶಾಂತಿ-ಸಹೋದರತ್ವ ಸಮಾನತೆಯೇ ನಮ್ಮೆಲ್ಲರ ಮೂಲ ಆಶಯವಾಗಿರಬೇಕು. ಐಕ್ಯತೆಯಿಂದ ಕೂಡಿದ ದೇಶದಲ್ಲಿ ನಾವು ಜಾತಿ, ಮತ, ಪಂಥ ಬಿಟ್ಟು ಎಲ್ಲರೂ ಒಂದೇ ಜಾತಿ, ಅದು ಮಾನವ ಜಾತಿ. ದೇಶ ರಕ್ಷಣೆಗಾಗಿ ಹೋರಾಟ ಮಾಡುವವರು ಯಾರೂ ಕೂಡ ಜಾತಿ ನೋಡಿ ಸೈನ್ಯಕ್ಕೆ ಸೇರುವುದಿಲ್ಲ. ಸಮಾಜದಲ್ಲಿ ಇರುವಷ್ಟು ದಿನ ನಾವುಗಳು ಸಮಾಜದ ನಾಗರಿಕರಾಗಿ ಸೇವೆ ಮಾಡಬೇಕು ಎಂದರು.

# ರಚನಾ ಕ್ರೀಡಾಂಗಣದ ಅಭಿವೃದ್ಧಿಗೆ ಸಹಕಾರ

## ಶೆಟಲ್ ಬ್ಯಾಡ್ಮಿಂಟನ್ ಉಡನ್ ಕೋರ್ಟ್ ಉದ್ಘಾಟಿಸಿದ ಶಾಸಕ ರಾಮಪ್ಪ



ಹರಿಹರ, ಜ. 27- ಹಿರಿಯ ಪತ್ರಕರ್ತರಾಗಿದ್ದ ಜಿ. ಸುರೇಶ್ ಗೌಡ ಅವರ ಆಶಯದಂತೆ ರಚನಾ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲು ಬೇಕಾದ ಸಹಕಾರ ನೀಡುವುದಾಗಿ ಶಾಸಕ ಎಸ್. ರಾಮಪ್ಪ ಭರವಸೆ ನೀಡಿದ್ದಾರೆ.

ನಗರದ ರಚನಾ ಕ್ರೀಡಾಂಗಣದ ಮೇಲ್ಮಹಡಿಯಲ್ಲಿ ನೂತನವಾಗಿ ಸುಮಾರು ಎಂಟು ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿರುವ ಶೆಟಲ್ ಬ್ಯಾಡ್ಮಿಂಟನ್ ಉಡನ್ ಕೋರ್ಟ್ ಅನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ನಗರದಲ್ಲಿ ಸುಸಜ್ಜಿತ ಒಳಾಂಗಣ ಕ್ರೀಡಾಂಗಣ ನಿರ್ಮಿಸಬೇಕೆಂಬುದು ಸುರೇಶ್ ಗೌಡರ ಕನಸಾಗಿತ್ತು. ಅವರು ಹಗಲಿರುಳೆನ್ನದೇ ಈ ಕ್ರೀಡಾ ಸಂಸ್ಥೆಯನ್ನು ಕಟ್ಟಲು ಶ್ರಮಿಸಿದ್ದರು. ಅವರ ಅಗಲಿಕೆ ನಂತರವೂ ಇಲ್ಲಿ ಪ್ರಗತಿ ಕಾರ್ಯ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಈ ಸಂಸ್ಥೆಯ ಅಭಿವೃದ್ಧಿಗೆ 5 ಲಕ್ಷ ಅನುದಾನ ನೀಡುವುದಾಗಿ ವಾಗ್ದಾನ ಮಾಡಿದ್ದೆ. ಆದರೆ, ಕೊರೊನಾ ಕಾರಣದಿಂದ ಅನುದಾನ ಕೊಡಲು ಸಾಧ್ಯವಾಗಿರಲಿಲ್ಲ. ಇನ್ನು ಮೂರು ತಿಂಗಳಲ್ಲಿ ಅನುದಾನ ಬಿಡುಗಡೆ ಮಾಡಿಸುತ್ತೇನೆ ಎಂದರು.

ಕ್ರೀಡಾ ಸಂಸ್ಥೆಯ ಅಧ್ಯಕ್ಷ ಗಿರೀಶ್ ಹೆಗ್ಗಪ್ಪ ಮಾತನಾಡಿ, ಹೆಚ್ಚಿನ ಅಭಿವೃದ್ಧಿ ಕಾರ್ಯಗಳಿಗೆ ಶಾಸಕರು ಸಹಕಾರ ನೀಡಬೇಕೆಂದು ಕೋರಿದರು.

ಉಪಾಧ್ಯಕ್ಷ ಆರ್.ಟಿ. ಚಂದ್ರಕಾಂತ್ ಮಾತನಾಡಿ, ಒಂದೇ ಸೂರಿನಲ್ಲಿ ಹಲವು ಕ್ರೀಡೆಗಳ ತರಬೇತಿ ಹಾಗೂ ಸ್ಪರ್ಧೆಗಳ ಆಯೋಜನೆ ಸೇರಿದಂತೆ ಹಲವು ಕಾರ್ಯಗಳು ಬಾಕಿ ಇವೆ. ಈಗ 8 ಲಕ್ಷ ರೂ. ವೆಚ್ಚದಲ್ಲಿ ಎರಡು ಬ್ಯಾಡ್ಮಿಂಟನ್ ಕೋರ್ಟ್ ನಿರ್ಮಾಣವಾಗಿರುವುದು ಕ್ರೀಡೆಗೆ ಅನುಕೂಲ ಎಂದರು.

ಕಾರ್ಯದರ್ಶಿ ಪಂಚಾಕ್ಷರಿ, ನಿರ್ದೇಶಕರಾದ ಎಸ್.ಎಂ. ಪ್ರಕಾಶ್, ಅಜಿತ್ ಸಾವಂತ್, ಕೆ.ಎಸ್. ಸುಧಾಕರ್, ಹೆಚ್.ಎಂ. ನಾಗರಾಜ್. ಶ್ರೀಧರ್ ಶೆಟ್ಟಿ ಹಮ್ಮಿಗ್ಗಿ, ಪ್ರಶಾಂತ ರಾಯ್ಕರ್, ಪರಶುರಾಮ ಕಾಟ್ವೆ, ಮುರುಗೇಶ್, ಸದಸ್ಯರಾದ ಅನಿಲ್, ಉಮೇಶ್, ಶಿವಯೋಗಿ, ಸಂತೋಷ್, ಕೃಷ್ಣ, ರವೀಂದ್ರ ಸಿಂಗ್, ನಾಗರಾಜ್, ಲೋಕೇಶ್, ಅಶೋಕ್, ಮೌನೇಶ್, ಮಧು, ಈಶ್ವರ್, ಮಂಜುನಾಥ್ ಇತರರು ಉಪಸ್ಥಿತರಿದ್ದರು.

# ಹರಪನಹಳ್ಳಿ: ತರಾತುರಿಯಲ್ಲಿ ನಿವೇಶನಗಳಿಗೆ ಖಾತೆ ಹಂಚಿಕೆ



ಹರಪನಹಳ್ಳಿ, ಜ.27- ಪಟ್ಟಣದ ಪುರಸಭೆ ವ್ಯಾಪ್ತಿಗೆ ಒಳಪಡುವ ಸರ್ವೆ ನಂಬರ್ 365/2 ಮತ್ತು 355/1 ರ ಜಮೀನುಗಳಲ್ಲಿ ಕೈಗೊಂಡಿರುವ ನಿವೇಶನಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಮಾಲೀಕರಿಂದ ಸರಿಯಾಗಿ ದಾಖಲೆಗಳನ್ನು ಪಡೆಯದೇ ತರಾತುರಿಯಲ್ಲಿ ನಿವೇಶನಗಳಿಗೆ ಖಾತೆ ಹಂಚಿಕೆ ಮಾಡಲು ಮುಂದಾಗಿರುವ ಕ್ರಮ ಖಂಡಿಸಿ ಪುರಸಭೆ ಸದಸ್ಯರು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ.

ಈ ಸಂಬಂಧ ಜ.24 ರಂದು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿ ಬಂದಿರುವ ಪುರಸಭೆ ಸದಸ್ಯರಾದ ಜಾಕೀರ್ ಹುಸೇನ್, ಜೋಗಿನರ್ ಭರತೇಶ್, ಕೆ.ಸಾಹೀರಾ ಬಾನು, ಮತ್ತು ತಳವಾರ್ ಲಕ್ಕಮ್ಮ ಇವರುಗಳು ಪತ್ರಿಕಾ ಹೇಳಿಕೆ ನೀಡಿದ್ದು, ಪುರಸಭೆ ವ್ಯಾಪ್ತಿಗೆ ಸಂಬಂಧಪಟ್ಟಂತೆ ಸರ್ವೆ ನಂಬರ್ 365/2 ರ ಪೈಕಿ 4 ಎಕರೆ 87 ಸೆಂಟ್ಸ್ ಹಾಗೂ 355/1 ರ ಪೈಕಿ 5 ಎಕರೆ 6 ಸೆಂಟ್ಸ್ ಜಮೀನಿಗೆ ಸಂಬಂಧಪಟ್ಟ ಮಾಲೀಕರು ಈಗಾಗಲೇ ತಮ್ಮ ಜಮೀನುಗಳಲ್ಲಿ ರಚನೆ ಮಾಡಿಕೊಂಡಿರುವ ನಿವೇಶನಗಳಿಗೆ ಖಾತೆ ಹಂಚಿಕೆ ಮಾಡಿಕೊಡಲು ಪುರಸಭೆ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

**ಪುರಸಭೆ ಕ್ರಮ ಖಂಡಿಸಿ ಸದಸ್ಯರಿಂದ ಡಿಸಿಗೆ ದೂರು**

ಆದರೆ ಪುರಸಭೆ ಅಧಿಕಾರಿಗಳು ಮಾಲೀಕರು ಸಲ್ಲಿಸಿರುವ ಅರ್ಜಿಯ ದಾಖಲಾತಿಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಳ್ಳದೇ ನಿವೇಶನಗಳಿಗೆ ಖಾತೆ ಹಂಚಿಕೆ ಮಾಡಲು ಮುಂದಾಗಿದ್ದನ್ನು ಪ್ರಶ್ನಿಸಿ ಕಳೆದ ಸಾಮಾನ್ಯ ಸಭೆಯಲ್ಲಿ ವಿರೋಧ ವ್ಯಕ್ತಪಡಿಸಿದರೂ ಸಹ ಅದನ್ನು ಲೆಕ್ಕಿಸದೇ ತರಾತುರಿಯಲ್ಲಿ ನಿವೇಶನಗಳಿಗೆ ಖಾತೆ ಹಂಚಿಕೆ ಮಾಡಲು ಆದೇಶ ಮಾಡಿದ್ದನ್ನು ಖಂಡಿಸಿ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದೇವೆ ಎಂದರು.

ಕೂಡಲೇ ಖಾಲಿ ನಿವೇಶನಗಳಿಗೆ ಡೋರ್ ನಂಬರ್ ಹಂಚಿಕೆ ಮಾಡಲು ಮಾಡಿರುವ ಆದೇಶವನ್ನು ಹಿಂಪಡೆದುಕೊಳ್ಳುವಂತೆ ಹಾಗೂ ಪುರಸಭೆ ಕಾರ್ಯಾಲಯಕ್ಕೆ ಸೂಕ್ತ ನಿರ್ದೇಶನ ನೀಡುವಂತೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡಿದ್ದೇವೆ ಎಂದು ತಿಳಿಸಿದರು.

# ಎಸ್‌ಟಿಪಿಐ ಕೇಂದ್ರ ಏಪ್ರಿಲ್ ವೇಳೆಗೆ ಸಿದ್ಧ

(1ನೇ ಪುಟದಿಂದ) ಕೇಂದ್ರದಲ್ಲಿ ಸಿಗಲಿವೆ ಎಂದವರು ಹೇಳಿದರು.

ಈ ಉಪ ಕೇಂದ್ರದಿಂದ ದಾವಣಗೆರೆಯಲ್ಲಿ ನವೋದ್ಯಮ ಹಾಗೂ ಉದ್ಯಮಶೀಲತೆಗೆ ಅಗತ್ಯವಾದ ಸೌಲಭ್ಯಗಳು ಸಿಗಲಿವೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದು ತ್ಯಾಗಿ ಹೇಳಿದ್ದಾರೆ.

ಈ ಉಪ ಕೇಂದ್ರದಿಂದ ಐ.ಟಿ. ರಫ್ತಿಗೆ ಹೆಚ್ಚಿನ ನೆರವಾಗಲಿದೆ. ಇಲ್ಲಿನ ಎಲ್ಲ ಕಾಲೇಜುಗಳು ಹಾಗೂ ವಿದ್ಯಾರ್ಥಿಗಳೂ ಸಹ ಸೌಲಭ್ಯಗಳಿಂದ ಲಾಭ ಪಡೆಯಬಹುದು ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಜೊತೆ ಒಪ್ಪಂದದ ಷರತ್ತುಗಳನ್ನು ಅಂತಿಮಗೊಳಿಸುವುದು ವಿಳಂಬವಾಗಿತ್ತು. ಕಳೆದ ಡಿಸೆಂಬರ್‌ನಲ್ಲಿ ಎಸ್‌ಟಿಪಿಐ ಕಾಮಗಾರಿ ಆರಂಭವಾಗಿದೆ ಎಂದರು.

ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಎಸ್‌ಟಿಪಿಐ, ಮುಕ್ತ ವಿಶ್ವವಿದ್ಯಾನಿಲಯ ಹಾಗೂ ಸಂಸದ ಜಿ.ಎಂ. ಸಿದ್ದೇಶ್ವರ ಅವರ ನಡುವೆ ಸಂಪರ್ಕ ಕೊಂಡಿಯಾಗಿ ಜಿಲ್ಲಾಡಳಿತ ಕೆಲಸ ಮಾಡುತ್ತಿದೆ. ಮಾರ್ಚ್ ಅಂತ್ಯದೊಳಗೆ ಎಸ್‌ಟಿಪಿಐ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಂಸತ್ತಿನ ಬಜೆಟ್ ಅಧಿವೇಶನ ಪೂರ್ಣಗೊಂಡ ನಂತರ ಏಪ್ರಿಲ್‌ನಲ್ಲಿ ಉಪ ಕೇಂದ್ರದ ಉದ್ಘಾಟನೆ ಮಾಡುವಂತೆ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರನ್ನು ಸಂಸದ ಸಿದ್ದೇಶ್ವರ ಅವರು ಸಂಪರ್ಕಿಸಿ ಕೇಳಿದ್ದಾರೆ ಎಂದೂ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತ ರಾವ್ ಜಾಧವ್, ಹುಬ್ಬಳ್ಳಿ ಎಸ್‌ಟಿಪಿಐ ಕೇಂದ್ರದ ಜಂಟಿ ನಿರ್ದೇಶಕ ಶಶಿಕುಮಾರ್, ಜಿಪಂ ಉಪಕಾರ್ಯದರ್ಶಿ ಆನಂದ್ ಉಪಸ್ಥಿತರಿದ್ದರು.

### ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರಕ್ಕೆ ಪ್ರಯತ್ನ

ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯದ ವತಿಯಿಂದ ದಾವಣಗೆರೆಯಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ಏಪ್ರಿಲ್ ತಿಂಗಳಲ್ಲಿ ಎಸ್‌ಟಿಪಿಐ ಉಪ ಕೇಂದ್ರ ಕಾರ್ಯಾರಂಭ ಮಾಡಲಿದೆ. ಇದರ ಜೊತೆಗೆ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರ ತರಲು ಪ್ರಸ್ತಾವನೆ ಸಿದ್ಧಪಡಿಸಲು ಸೂಚನೆ ನೀಡಿದ್ದೇನೆ. ಇದಕ್ಕೆ ಎಸ್‌ಟಿಪಿಐ ಬೆಂಗಳೂರಿನ ಹಿರಿಯ ನಿರ್ದೇಶಕ ಶೈಲೇಂದ್ರ ತ್ಯಾಗಿ ಸಹಮತ ವ್ಯಕ್ತಪಡಿಸಿದ್ದಾರೆ ಎಂದು ಸಿದ್ದೇಶ್ವರ ಹೇಳಿದ್ದಾರೆ.

ಸೆಂಟರ್ ಆಫ್ ಎಕ್ಸಲೆನ್ಸ್ ಮೂಲಕ ನವೋದ್ಯಮಗಳಿಗೆ ಮೂಲಸೌಕರ್ಯ, ಸಂಪನ್ಮೂಲ, ತರಬೇತಿ, ಮಾರ್ಗದರ್ಶನ, ತಂತ್ರಜ್ಞಾನ ಬೆಂಬಲ ಮತ್ತು ಧನ ಸಹಾಯ ಸಿಗಲಿದೆ ಎಂದವರು ತಿಳಿಸಿದ್ದಾರೆ.

### ನವೋದ್ಯಮಿಗಳು,ನವ ತಂತ್ರಜ್ಞಾನಕ್ಕೆ ನೆರವು

ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಸಂಘಟನೆಯಾದ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ ಐ.ಟಿ. - ಐ.ಟಿ.ಇ.ಎಸ್. ವಲಯ, ವಿಶೇಷವಾಗಿ ನವೋದ್ಯಮಗಳಿಗೆ ನೆರವಾಗುತ್ತಿದೆ. ಕೈಗಾರಿಕೆ, ಅನ್ವೇಷಣೆ, ಅಭಿವೃದ್ಧಿ, ನವೋದ್ಯಮಗಳಿಗೆ ಎಸ್‌ಟಿಪಿಐ ನೆರವಾಗುತ್ತಿದೆ. ಐ.ಒ.ಟಿ., ಬ್ಲಾಕ್‌ಚೈನ್, ಕೃತಕ ಬುದ್ಧಿವಂತಿಕೆ, ರೋಬೋಟಿಕ್ಸ್, ಅನಿಮೇಷನ್, ಡಾಟಾ ಸೈನ್ಸ್ - ಅನಲಿಟಿಕ್ಸ್ ಅಷ್ಟೇ ಅಲ್ಲದೇ, ಸೈಬರ್ ರಕ್ಷಣೆ ಮತ್ತಿತರೆ ಇತ್ತೀಚಿನ ತಂತ್ರಜ್ಞಾನಗಳ ಅಭಿವೃದ್ಧಿಗೆ ಎಸ್.ಟಿ.ಪಿ.ಐ. ಉತ್ತೇಜನ ನೀಡುತ್ತಿದೆ.



**ಹಳೇಬಾತಿಯಲ್ಲಿ ಗಣರಾಜ್ಯೋತ್ಸವ**

ದಾವಣಗೆರೆ, ಜ. 27- ಹಳೇಬಾತಿ ಗ್ರಾಮ ಪಂಚಾಯ್ತಿಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಗ್ರಾಮ ಪಂಚಾಯ್ತಿ ಅಧ್ಯಕ್ಷ ಎಸ್.ಆರ್. ಸಿದ್ದೇಶ್ ಮತ್ತು ಉಪಾಧ್ಯಕ್ಷರು, ಸದಸ್ಯರು ಹಾಗೂ ಗ್ರಾಮಸ್ಥರು ಇದ್ದರು.

# ಭರಮಸಾಗರದ ಪಾಷಾ ಆಯ್ಕೆ



ಭರಮಸಾಗರ, ಜ.27- ರಾಜ್ಯ ಕಾಂಗ್ರೆಸ್ ಕಿಸಾನ್ ವಿಭಾಗದ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಭರಮಸಾಗರದ ದಿ॥ ಹಯಾತ್ ಸಾಬ್‌ರ ಮಗ ಗ್ರಾ.ಪಂ. ಮಾಜಿ ಅಧ್ಯಕ್ಷ ಶಮೀಮ್ ಪಾಷಾ ಅವರ ನಿವಾಸಕ್ಕೆ ಮಾಜಿ ಸಚಿವ ಹೆಚ್. ಆಂಜನೇಯ ಭೇಟಿ ನೀಡಿ, ಶಾಲು ಹೊದಿಸಿ ಸನ್ಮಾನಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಬಷೀರ್ ಸಾಬ್ ಇತರರು ಇದ್ದರು.

# ಮಾ.15-16ಕ್ಕೆ ದುಗ್ಗಮ್ಮನ ಜಾತ್ರೆ

(1ನೇ ಪುಟದಿಂದ) ಮೂಲಕ ಹಬ್ಬದಾಚರಣೆ ಮಾಡುವ ಅಭಿಪ್ರಾಯ ವ್ಯಕ್ತಪಡಿಸಿದರು. ದೂಡಾ ಮಾಜಿ ಅಧ್ಯಕ್ಷರಾದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಬಳ್ಳಾರಿ ಷಣ್ಮುಖಪ್ಪ, ಕರಿಗಾರ ಬಸಪ್ಪ ಮತ್ತಿತರರು ಸಾಂಪ್ರದಾಯಕ ಹಾಗೂ ಗ್ರಾಮೀಣ ಕುಸ್ತಿ ಕಲೆ ಮತ್ತು ಟಗರಿನ ಕಾಳಗ ಏರ್ಪಡಿಸುವ ಬಗ್ಗೆ ಸಲಹೆ ನೀಡಿದರು.

ಸಭೆಯಲ್ಲಿ ಮಾಜಿ ಶಾಸಕ ಯಜಮಾನ್ ಮೋತಿ ವೀರಣ್ಣ, ಟ್ರಸ್ಟ್ ಖಜಾಂಚಿ ಅಥಣಿ ಎಸ್.ವೀರಣ್ಣ, ಧರ್ಮದರ್ಶಿ ಗೌಡ್ರ ಚನ್ನಬಸಪ್ಪ, ಟ್ರಸ್ಟ್ ಸದಸ್ಯರಾದ ಜೆ.ಕೆ. ಕೊಟ್ರಬಸಪ್ಪ, ಬಿ.ಹೆಚ್.ವೀರಭದ್ರಪ್ಪ, ಹೆಚ್.ಬಿ. ಗೋಣೆಪ್ಪ, ಉಮೇಶ್ ಸಾಳಂಕಿ, ಪಿ.ಜಿ. ಸತ್ಯನಾರಾಯಣ, ಹನುಮಂತರಾವ್, ಮಾಲತೇಶರಾವ್ ಜಾಧವ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯ ಎಲ್.ಡಿ. ಗೋಣೆಪ್ಪ, ಎನ್. ನೀಲಗಿರಿಯಪ್ಪ, ಪೈಲ್ವಾನ್ ಹೆಚ್.ಜಿ. ಸಂಗಪ್ಪ, ಎಲ್.ಎಂ. ಹನುಮಂತಪ್ಪ, ಇಟ್ಟಿಗುಡಿ ಮಂಜುನಾಥ್, ಲಿಂಗರಾಜ್, ನರಸಿಂಹ ಎಂ.ಬಿ. ಕೇರಿ, ಬಾಬುರಾವ್, ಎಎಸ್ಪಿ ಬಸರಗಿ, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಗಜೇಂದ್ರಪ್ಪ ಮತ್ತಿತರರಿದ್ದರು.

**ಜಿಲ್ಲಾಧಿಕಾರಿ ವರ್ಗಾವಣೆ ಬೇಡ**

**ಜಿಲ್ಲೆಯಲ್ಲಿ ಕೋವಿಡ್-19 ವೈರಾಣು ಸೋಂಕು ಹರಡುವಿಕೆಯನ್ನು ತಡೆಗಟ್ಟುವಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿರುವ ಮತ್ತು ಜನ ಸಾಮಾನ್ಯರ ಸಮಸ್ಯೆಗಳಿಗೆ ಸದಾ ಸ್ಪಂದಿಸುತ್ತಿರುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ವರ್ಗಾವಣೆ ಸದ್ಯಕ್ಕೆ ಬೇಡ, ಹಬ್ಬ ಆಗುವವರೆಗಾದರೂ ಇರಲಿ ಎಂದು ವಿದ್ದಿ ನಾಗರಾಜ್ ಸಭೆಯಲ್ಲಿ ಪ್ರಸ್ತಾಪಿಸಿದರು.**


**ಬೇಕಾಗಿದ್ದಾರೆ**
ಇನ್‌ಡಿಸೈನ್ ಅನುಭವವಿರುವ ಕಂಪ್ಯೂಟರ್ ಆಪರೇಟರ್ ರಾತ್ರಿ ಪಾಳ್ಯಕ್ಕೆ ಬೇಕಾಗಿದ್ದಾರೆ.
08192 254736

**ಸೈಟು ಬೇಕಾಗಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x40 ಅಥವಾ 30x50 ಪೂರ್ವ ಮತ್ತು ಉತ್ತರಕ್ಕೆ ಇರುವ ಸೈಟ್ ಖರೀದಿಗೆ ಬೇಕಾಗಿದೆ. ಪೂರಾ ಡಿ.ಡಿ. ಮುಖಾಂತರ 15 ದಿನಗಳಲ್ಲಿ ರಿಜಿಸ್ಟರ್ ಮಾಡಿಕೊಳ್ಳಲಾಗುವುದು.
ಸಂಪರ್ಕಿಸಿ : 80503 98121

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 30x50 ಪೂರ್ವ, 30x40 ದಕ್ಷಿಣ, 40x60 ಪೂರ್ವ, 50x80 ಪೂರ್ವ, 55x78 ಉತ್ತರ-ಪೂರ್ವ, 45x50 ಕಾರ್ನರ್, 30x50 ದಕ್ಷಿಣ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಮಾರಾಟಕ್ಕೆ/ ಖರೀದಿಗೆ ವಿಚಾರಿಸಿರಿ**
ಪಿ.ಜೆ. ಬಡಾವಣೆ, 30x80 ಪಶ್ಚಿಮ ನಿಜಲಿಂಗಪ್ಪ ಲೇಔಟ್ 30x40 ಉತ್ತರ ಕುವೆಂಪು ಲೇಔಟ್ 40x60 ದಕ್ಷಿಣ, 30x50 ಉತ್ತರ
ಕೆ.ಬಿ. ಸುರೇಶ್
ಫೋ. : 95911 60520


### ಜೈನ್ ಕಾಲೇಜಿನಲ್ಲಿ ಗಣರಾಜ್ಯೋತ್ಸವ

ದಾವಣಗೆರೆ, ಜ. 27- ನಗರದ ಜೈನ್ ಮಹಾವಿದ್ಯಾಲಯದ ಕಾಲೇಜಿನಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್ ಉಪಸ್ಥಿತರಿದ್ದರು.


**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಸಮುದ್ರದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**ಆಸ್ಪತ್ರೆ, ಕ್ಲಿನಿಕ್**
ಡಯಾಗ್ನೋಸ್ಟಿಕ್ ಸೆಂಟರ್ ಪ್ರಾರಂಭಿಸಲು 1ನೇ ಮಹಡಿ ಬಾಡಿಗೆಗೆ ಇದೆ. ಪಿ.ಜೆ. ಬಡಾವಣೆ, ಅಕ್ಕಮಹಾದೇವಿ ರಸ್ತೆ, ವಾಸನ್ ಐ ಕೇರ್ ಹತ್ತಿರವಿರುವ ಸೂಕ್ತವಾದ 1ನೇ ಮಹಡಿ ಬಾಡಿಗೆಗೆ ಇದೆ.
ವಿಚಾರಿಸಿ : 94494 40239

**ಮಾರಾಟಕ್ಕೆ**
ಆವರಗೆರೆ (ಸಿದ್ದಲಿಂಗೇಶ್ವರ ಸ್ಕೂಲ್ ಹತ್ತಿರ) ಸೈಟ್ ಪೂರ್ವ, 30x50. ಕುವೆಂಪು ನಗರ ಸೈಟ್ (ಕಾರ್ನರ್) 40x50. ಶಕ್ತಿನಗರ ಸೈಟ್ (ಉತ್ತರ) 30x45 ಮತ್ತು (ಪೂರ್ವ) 30x60, ಉತ್ತಮಚಂದ್ ಬಡಾವಣೆ ಸೈಟ್ (ಉತ್ತರ) 35x64.
78996 36597, 99165 25828

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಬೇಕಾಗಿದ್ದಾರೆ**
ಮನೆ ಕೆಲಸದೊಂದಿಗೆ ವಯಸ್ಸಾದವರನ್ನು ನೋಡಿಕೊಳ್ಳಲು 24 ಗಂಟೆಯೂ ಅಥವಾ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ಹೆಣ್ಣು ಮಕ್ಕಳು ಬೇಕಾಗಿದ್ದಾರೆ.
63639-54459

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಸೈಟ್ ಮಾರಾಟಕ್ಕೆ**
ದಾವಣಗೆರೆ ಎಸ್‌ಪಿ ಕಚೇರಿ ಎದುರುಗಡೆ ಇರುವ ಸ.ನಂ. 127/2ಎ2, 30x50 (ಉತ್ತರ) ಅಳತೆಯ ಖಾಲಿ ನಿವೇಶನ ಮಾರಾಟಕ್ಕಿದೆ. ಸಂಪರ್ಕಿಸಿ:
99804 38600
72596 78135

**ಲೋನ್ಸ್ (Loans)**
ವೈಯಕ್ತಿಕ ಸಾಲ/ Personal Loan
ವ್ಯವಹಾರ ಸಾಲ/Bussiness Loan
ಗೃಹ ಸಾಲ/ Home Loan
ಮನೆ ಅಡಮಾನ ಸಾಲ/Mortgage loan
76248 68848

**ಡೋರ್ ನಂ. ಸೈಟ್ ಮಾರಾಟಕ್ಕಿವೆ**
1) ಕಾರ್ನರ್ ಸೈಟ್ 40x28 ಸೈಟ್ ನಂ. 82, ಡೋರ್ ನಂ. 106/82
2) ಡೋರ್ ನಂ. 540/58, 20x30
3) ಡೋರ್ ನಂ. 540/59, 20x30
RTO ಹತ್ತಿರ, ಅಶೋಕ ನಗರ,
ಫೋ. : 73534 89323, 84970 87074

**HOUSE FOR LEASE**
2nd Floor, 2BHK, Vinobanagar, 3rd main, 15th cross, Davangere.
99800 33739
95382 00008

**ಕಾರ್ನರ್ ಸೈಟ್ ಮಾರಾಟಕ್ಕೆ**
870 ಅಡಿಯ ಪೂರ್ವ ಉತ್ತರ ಕಾರ್ನರ್ ಸೈಟ್ Rs. 2,150/Sqft (Negotiable) ನಂದಿನಿ ಲೇಔಟ್ ಹತ್ತಿರ, ಸರ್ವೆ ನಂ. 276/3. ಸಂಪರ್ಕಿಸಿ:
90361 89699, 72592 69940

**ಮಾರಾಟಕ್ಕಿದೆ**
ಸಿಮೆಂಟ್ ಬ್ರಿಕ್ಸ್ ಫ್ಯಾಕ್ಟರಿ ಮಾರಾಟಕ್ಕಿದೆ. ಸರ್ವೆ ನಂಬರ್ 134/3 ಒಂದು ಎಕರೆ ಎನ್.ಎ. ಆಗಿದೆ 27 ಗುಂಟೆ ಹೊಲ ಮಾರಾಟಕ್ಕಿದೆ -ಐಗೂರು, ದಾವಣಗೆರೆ ಜಿಲ್ಲೆ
90365 59096, 92428 37951

**ಮನೆ ಮಾರಾಟಕ್ಕಿದೆ**
20x60 ಅಳತೆಯಲ್ಲಿ ಎಂಸಿಸಿ ಬಿ ಬ್ಲಾಕ್‌ನಲ್ಲಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
94496 84768
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಬೇಕಾಗಿದ್ದಾರೆ**
ಗಿಫ್ಟ್ ಶಾಪ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಫೋ. : 98454 56818


**ಸೈಟ್ ಮಾರಾಟಕ್ಕಿವೆ**
ಎಂಸಿಸಿ 'ಬಿ' ಬ್ಲಾಕ್ 40x60 ಪೂರ್ವ - ಪಶ್ಚಿಮ, ಎಸ್.ಎಸ್. ಲೇಔಟ್ 40x60, 40x60
ರಿಯಲ್ ಎಸ್ಟೇಟ್ ಏಜೆಂಟ್ ಪ್ರಶಾಂತ್
99726 70257

**ಹೋಟೆಲ್ ಬಾಡಿಗೆಗೆ ಇದೆ**
ಚಾಲ್ತಿ ಇರುವ ಹೋಟೆಲ್ ಸಾಮಾನು ಸಮೇತ ಬಾಡಿಗೆಗೆ ಇದೆ. ಮಾಗಾನಹಳ್ಳಿ ರೋಡ್, ಗುಜರಿ ಲೈನ್, ಮೇನ್ ರೋಡ್, ದಾವಣಗೆರೆ.
ಫೋ. : 87001 96143

**ತಿಂಡಿ ಗಾಡಿ**
ಗೋಬಿ/ಎಗ್‌ರೈಸ್ ಇತ್ಯಾದಿ ಮಾಡಲು ಬಾಡಿಗೆಗೆ ಸಿಗುತ್ತವೆ
74062 78270

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ವಕವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


### ಲಕೋಟಿ ಚಂದ್ರಪ್ಪ ನಿಧನ



ದಾವಣಗೆರೆ ಜಾಲಿನಗರ 2ನೇ ಮೇನ್, 1ನೇ ಕ್ರಾಸ್ ವಾಸಿ ಲಕೋಟಿ ಚಂದ್ರಪ್ಪ (51) ಅವರು ದಿನಾಂಕ 27.1.2022ರ ಗುರುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.1.2022ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ನಗರದ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.


**ಹೆಸರು ಬದಲಾವಣೆ**
ಜೈಬಾ ಇಲಾಹನ್ ಕೋಂ. ಅಜರುದ್ದೀನ್ ಎ. ಮಕಾನ್‌ದಾರ್ ಆದ ನಾನು ದಿ. : 25.5.2017ರಂದು ಗಂಡು ಮಗುವಿಗೆ ಜನ್ಮ ನೀಡಿದ್ದು, ಅದರ ಹೆಸರನ್ನು ಫಾಜ್‌ಆತೀಫ್ ಅಜರುದ್ದೀನ್ ಮಕಾನ್‌ದಾರ್ ಎನ್ನುವುದರ ಬದಲು ಮಹಮ್ಮದ್ ಶಾ ಎ ಮಕಾನ್‌ದಾರ್ ಎಂದು ಜನನ ಪ್ರಮಾಣ ಪತ್ರದಲ್ಲಿ ತಪ್ಪಾಗಿ ನಮೂದಾಗಿದೆ. ಸಂಖ್ಯೆ 2017 ಬಿ-4621 ದಿ.: 30.05.2017. ಆದ್ದರಿಂದ ದಿ. : 24.1.2022 ರಂದು ನೋಟರಿ ದಾವಣಗೆರೆಯವರ ಮುಂದೆ ನನ್ನ ಮಗನ ಹೆಸರು ಫಾಜ್ ಆತೀಫ್ ಅಜರುದ್ದೀನ್ ಮಕಾನ್‌ದಾರ್ ಎಂದು ಮುಂದುವರೆಸುತ್ತೇನೆಂದು ಪ್ರಮಾಣೀಕರಿಸಿದ್ದೇನೆ.
ಸಹಿ/- ಜೈಬಾ ಇಲಾಹನ್

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**Requriment**
for Market Sale Person for Best salary
Address:
Gurudev Traders
# 108/9 RMC Link Road, Davanagere
94498 32401, 94484 92401

**ಬೇಕಾಗಿದ್ದಾರೆ**
ಗೋಲ್ಡ್ ಟೆಸ್ಟಿಂಗ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ.
ಫೋ. : 63646 56169

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್ ದಾವಣಗೆರೆ.
ರೂಂ ಬಾಡಿಗೆಗೆ ಇದೆ
ಚಾಮರಾಜ ಪೇಟೆ, ದಾವಣಗೆರೆ.
ಫೋ. : 82177 72482

**ಬೇಕಾಗಿದ್ದಾರೆ**
ನುರಿತ ವಾಹನ ಚಾಲಕರು ಬೇಕಾಗಿದ್ದಾರೆ.
94488 39229, 94492 66133

**ಹುಡುಗರು ಬೇಕಾಗಿದ್ದಾರೆ**
ಅಂಗಡಿ ಕೆಲಸಕ್ಕೆ ದಾವಣಗೆರೆ
94480 38223

**Vacancy (Job)**
Accountant Required (Tally, Excel), Labour (qualification Any) Salary 8000 - 10,000/- Food Available (lunch)
81055 94402
91481 88927

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬದವರು ಬೇಕಾಗಿದ್ದಾರೆ. ಸಂಪರ್ಕಿಸಿ :
94484 39639

**ಮನೆ ಬಾಡಿಗೆಗೆ**
ಜಯನಗರದಲ್ಲಿ 15x40 ವಿಸ್ತೀರ್ಣದ ಮೊದಲ ಮಹಡಿ ಪೂರ್ವ ದಿಕ್ಕಿನಲ್ಲಿರುವ ಮನೆ ಬಾಡಿಗೆಗೆ ಹಾಗೂ ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ. ಸಂಪರ್ಕಿಸಿ :
94484 39639


# ಮಾರ್ಚ್ ಮೊದಲ ವಾರ ಬಜೆಟ್

(1ನೇ ಪುಟದಿಂದ) ಆದರೆ ಜನರಿಗೆ ನಿರಂತರವಾಗಿ ಸಹಾಯ ಮಾಡುವಂತಹ ಕಲ್ಯಾಣ ಯೋಜನೆಗಳನ್ನು ರೂಪಿಸಿದ್ದೇವೆ ಎಂದರು. ಕೋವಿಡ್ ನಿರ್ವಹಣೆಗೆ ಸಂಬಂಧಿಸಿದಂತೆ ನಾಳೆ ತಜ್ಞರ ಜೊತೆ ಸಮಾಲೋಚನೆ ನಡೆಸಿ, ಮುಂದಿನ ತೀರ್ಮಾನಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು.

ಸಚಿವ ಸಂಪುಟ ಸಭೆಯಲ್ಲಿ ಕೋವಿಡ್ ಸ್ಥಿತಿಗತಿ, ಮುಂದಿನ ದಿನಗಳಲ್ಲಿ ಕೋವಿಡ್ ನಿರ್ವಹಣೆ ಬಗ್ಗೆ ಚರ್ಚೆ ಮಾಡಲಾಗಿದೆ. ಹಾಲಿ ಇರುವ ನಿಯಮಗಳನ್ನು ಸಡಿಲಿಕೆ ಮಾಡುವ ಬಗ್ಗೆ ಚರ್ಚೆ ನಡೆಸಲಾಗಿದೆ. ನಿಯಮಗಳನ್ನು ತೆರವುಗೊಳಿಸಲು ಬೇರೆ ಬೇರೆ ವಲಯದವರ ಮನವಿ, ಶಾಲಾ-ಕಾಲೇಜುಗಳ ಬಗ್ಗೆ ಚರ್ಚೆ ಮಾಡಿದ್ದೇವೆ ಎಂದರು.

# ಕಾಂಗ್ರೆಸ್ ತೊರೆಯುವೆ: ಇಬ್ರಾಹಿಂ

(1ನೇ ಪುಟದಿಂದ) ರಾಜೀನಾಮೆ ಕೊಡುತ್ತೇನೆ ಎಂದರು. ನನಗೆ ಸ್ಥಾನ ತಪ್ಪಿದ್ದರ ಬಗ್ಗೆ ಸಿದ್ದರಾಮಯ್ಯ ಉತ್ತರಿಸಬೇಕು. ದೆಹಲಿಯವರು ಏನು ಹೇಳಿದರು ಎನ್ನುವುದಕ್ಕೆ ನನ್ನ ಬಳಿ ದಾಖಲೆಗಳಿವೆ. ಸಿದ್ದರಾಮಯ್ಯ ಅವರಿಗಾಗಿ ದೇವೇಗೌಡರನ್ನು ಬಿಟ್ಟುಬಂದೆ, ಅವರ ಸಂಕಷ್ಟ ಸಮಯದಲ್ಲಿ ಜೊತೆಯಲ್ಲೇ ನಿಂತು ಹೆಜ್ಜೆ ಹಾಕಿದ್ದೆ. ಆದರೆ ನನಗೆ ಅವರು ಮಾತ್ರ ಏನೂ ಮಾಡಲಿಲ್ಲ. ಕಾಂಗ್ರೆಸ್‌ನಲ್ಲಿ ಅವರೇ ತಬ್ಬಲಿಯಾಗಿದ್ದಾರೆ ಎಂದವರು ಹೇಳಿದ್ದಾರೆ. ನನಗೆ ಎಲ್ಲರೂ ಕರೆ ಮಾಡುತ್ತಿದ್ದಾರೆ. ಕುಮಾರಸ್ವಾಮಿ ಅವರೂ ಮಾಡಿದ್ದಾರೆ. ನನ್ನ ಅಭಿಮಾನಿಗಳ ಜೊತೆ ಚರ್ಚೆ ಮಾಡಿ, ತಮ್ಮ ಮುಂದಿನ ರಾಜಕೀಯ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು.

# ಸಂಬಂಧಿಯಿಂದಲೇ ಬರ್ಬರ ಹತ್ಯೆ

(1ನೇ ಪುಟದಿಂದ) ಅಲ್ತಾಫ್ ವಾಪಸ್ಸಾಗಿಲ್ಲ ಎಂದು ತಂದೆ ಮೆಹಬೂಬ್ ಪಾಷಾ ಹರಿಹರದಲ್ಲಿ ದೂರು ನೀಡಿದ್ದರು.

ಮರು ದಿನ ಜ. 19ರಂದು ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯ ಕುಂದುವಾಡ ಕೆರೆ ಬಳಿ ಕತ್ತು ಕೊಯ್ದು ಅಲ್ತಾಫ್ ಹತ್ಯೆ ಮಾಡಿರುವುದು ಪತ್ತೆಯಾಗಿ, ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ನಗರ ಡಿ.ವೈ.ಎಸ್.ಪಿ. ನರಸಿಂಹ ತಾಮ್ರಧ್ವಜ ನೇತೃತ್ವದಲ್ಲಿ ತನಿಖಾಧಿಕಾರಿ ಹೆಚ್. ಗುರುಬಸವರಾಜ್, ವಿದ್ಯಾನಗರ ಠಾಣೆಯ ಪಿ.ಎಸ್.ಐ. ಪ್ರಸಾದ್, ಜಿ.ಎಂ. ರೇಣುಕ ಅವರನ್ನು ಒಳಗೊಂಡ ತಂಡ ಪ್ರಕರಣದ ವಿಚಾರಣೆ ನಡೆಸಿ ಆರೋಪಿಯನ್ನು ಪತ್ತೆ ಮಾಡಿದ್ದಾರೆ ಎಂದು ಎಸ್ಪಿ ರಿಷ್ಯಂತ್ ತಿಳಿಸಿದ್ದಾರೆ.

# ಧ್ವಜ ಇಳಿಸುವ ವೇಳೆ ಬಾಲಕಿ ಸಾವು

(1ನೇ ಪುಟದಿಂದ) ಬಾಲಕಿಯರ ಸರ್ಕಾರಿ ಹಾಸ್ಟೆಲ್‌ನಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮ ಆಚರಿಸಲಾಗಿತ್ತು. ಘಟನೆಯ ನಂತರ ಹಾಸ್ಟೆಲ್ ಅಧೀಕ್ಷಕರನ್ನು ಅಮಾನತ್ತುಗೊಳಿಸಿರುವ ಜಿಲ್ಲಾಡಳಿತ, ಘಟನೆಯ ತನಿಖೆಗೆ ಆದೇಶಿಸಿದೆ.

ಬುಧವಾರ ಸಂಜೆ ಈ ಘಟನೆ ನಡೆದಿದೆ. ಕಿರಣ್ ದಿವಾನ್ ಹಾಗೂ ಕಾಜಲ್ ಚೌಹಾಣ್ ಅವರು ಕಬ್ಬಿಣದ ಕಂಬದ ಮೇಲೆ ಹಾರುತ್ತಿದ್ದ ರಾಷ್ಟ್ರಧ್ವಜ ತೆಗೆಯಲು ಹೋಗಿದ್ದರು. ಆಗ ಹಠಾತ್ತನೆ ಹಾಸ್ಟೆಲ್ ಆವರಣದಲ್ಲಿ ಹಾದು ಹೋಗಿದ್ದ ಹೈಟೆನ್ಷನ್ ವೈರ್ ಮೇಲೆ ಬಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 9ನೇ ತರಗತಿಯ ದಿವಾನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

# ನೀರಿನ ಮಿತ ಬಳಕೆಗೆ ಶಾಸಕ ಲಿಂಗಣ್ಣ ಕರೆ



**ಕುರ್ಕಿಯಲ್ಲಿ ಭತ್ತ ಬೆಳೆಯುವ ರೈತರಿಗೆ ತರಬೇತಿ**

ದಾವಣಗೆರೆ, ಜ.27 - ರೈತರು ನೀರನ್ನು ಅವಶ್ಯಕತೆಗನುಗುಣವಾಗಿ ಮಿತವಾಗಿ ಬಳಕೆ ಮಾಡಿಕೊಳ್ಳಬೇಕು ಎಂದು ಮಾಯಕೊಂಡ ಕ್ಷೇತ್ರದ ಶಾಸಕ ಪ್ರೊ. ಲಿಂಗಣ್ಣ ಹೇಳಿದರು.

ಕುರ್ಕಿ ಗ್ರಾಮದಲ್ಲಿ ಕೃಷಿ ಕಾಯಕ ಯೋಗಿ ರೈತ ಉತ್ಪಾದಕ ಸಂಸ್ಥೆ, ಕೃಷಿ ಇಲಾಖೆ ಸಹಯೋಗದಲ್ಲಿ ಭತ್ತ ಬೆಳೆಯುವ ರೈತರಿಗೆ ತರಬೇತಿ ಕಾರ್ಯಾಗಾರ ಹಾಗೂ ಅರ್ಹ ಫಲಾನುಭವಿಗಳಿಗೆ ತುಂತುರು ನೀರಾವರಿ ಘಟಕಗಳ ವಿತರಣೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ನೀರನ್ನು ಮಿತವಾಗಿ ಬಳಕೆ ಮಾಡಿಕೊಳ್ಳುವುದರಿಂದ ಭೂಮಿಯ ಗುಣಮಟ್ಟ ಕಾಪಾಡಿಕೊಳ್ಳುವುದರ ಜೊತೆಗೆ ಉತ್ತಮ ಬೆಳೆ ಪಡೆಯಬಹುದು. ರೈತರು ರೈತ ಉತ್ಪಾದಕ ಸಂಸ್ಥೆಗಳ ಕಡೆ ಗಮನ ಹರಿಸಬೇಕು. ಕೇಂದ್ರ ಸರ್ಕಾರ 75 ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರೋತ್ಸಾಹಿಸಲು 750 ರೈತ ಉತ್ಪಾದಕ ಸಂಸ್ಥೆಗಳಿಗೆ ರೂ.10 ಲಕ್ಷದಂತೆ ಸಹಾಯ ಧನ ನೀಡುತ್ತಿದೆ. ಅದರಂತೆ ಕೃಷಿ ಕಾಯಕ ಯೋಗಿ ರೈತ ಉತ್ಪಾದಕ ಕಂಪನಿ ಲಿ. ಕುರ್ಕಿಗೆ 10 ಲಕ್ಷ ಸಹಾಯ ಧನ ನೀಡಿದೆ ಎಂದು ತಿಳಿಸಿದರು.

ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞ ಡಾ॥ ಮಲ್ಲಿಕಾರ್ಜುನ್, ಭತ್ತ ಬೆಳೆಯುವ ರೈತರಿಗೆ ಡ್ರಮ್‌ಸೀಡರ್, ಕೂರಿಗೆ ಬಿತ್ತನೆ ಮತ್ತು ಚೆಲ್ಲು ಭತ್ತ ಕೃಷಿಯ ಕುರಿತು ತಾಂತ್ರಿಕ ಮಾಹಿತಿ ನೀಡಿದರು. ರೈತ ಉತ್ಪಾದಕ ಸಂಸ್ಥೆಯ ಅಧ್ಯಕ್ಷ ಸಿ.ಎನ್. ಲೋಹಿತ್ ಮಾತನಾಡಿದರು.

ಸಹಾಯಕ ಕೃಷಿ ನಿರ್ದೇಶಕ ಹೆಚ್.ಕೆ. ರೇವಣಸಿದ್ದನಗೌಡ, ಕುರ್ಕಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಜಿ.ನಂದ್ಯಪ್ಪ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದ ವಿಜ್ಞಾನಿ ಎ.ಎಂ. ಮಾರುತೇಶ್ ಇತರರಿದ್ದರು.

# ಸಾಚಾರ್ ವರದಿ ಜಾರಿಗೆ ಮುಂದಾಗದ ಸರ್ಕಾರ



**'ಸಾಚಾರ್ ವರದಿ' ವಿಚಾರ ಸಂಕಿರಣದಲ್ಲಿ ಡಾ. ರಝಾಕ್ ಉಸ್ತಾದ್ ಬೇಸರ**

ದಾವಣಗೆರೆ, ಜ.27- ಸಾಚಾರ್ ವರದಿ ಅನುಷ್ಠಾನದಿಂದ ಮುಸ್ಲಿಮರ ಸುಧಾರಣೆ ಸಾಧ್ಯವಿದೆ. ಆದರೆ ಆಡಳಿತಾರೂಢ ಯಾವುದೇ ಸರ್ಕಾರ ಈ ವರದಿಯ ಸಂಪೂರ್ಣ ಜಾರಿಗೆ ಮುಂದಾಗುತ್ತಿಲ್ಲ ಎಂದು ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಯ ರಾಜ್ಯ ಉಪಾಧ್ಯಕ್ಷ ಡಾ. ರಝಾಕ್ ಉಸ್ತಾದ್ ಅವರು ಬೇಸರ ವ್ಯಕ್ತಪಡಿಸಿದರು.

ನಗರದ ನೆರಳು ಬೀಡಿ ಕಾರ್ಮಿಕರ ಯೂನಿಯನ್ ಕಚೇರಿ ಸಭಾಂಗಣದಲ್ಲಿ ಕಳೆದ ವಾರ ಹಮ್ಮಿಕೊಂಡಿದ್ದ 'ಸಾಚಾರ್ ವರದಿ' ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶದ ಜನಸಂಖ್ಯೆಯಲ್ಲಿ ಶೇ. 14ರಷ್ಟು ಮುಸ್ಲಿಮರೇ ಇದ್ದಾರೆ. 6 ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಶೇ. 96ರಷ್ಟು ಮುಸ್ಲಿಮರು ಆಗಿದ್ದಾರೆ. ಈ ಸಮುದಾಯದ ರಾಜಕೀಯ ಮತ್ತು ಔದ್ಯೋಗಿಕ ಪ್ರಾತಿನಿಧ್ಯ ಮತ್ತು ಶೈಕ್ಷಣಿಕ ಪ್ರಗತಿ ಬಗ್ಗೆ ಅಧ್ಯಯನ ಮಾಡಿದಾಗ ತೀರ ಕಡಿಮೆ ಇದೆ ಎಂಬುದನ್ನು ವರದಿಯಲ್ಲಿ ತಿಳಿಸಲಾಗಿದೆ. ದೇಶದ ಎಲ್ಲ ಸಮುದಾಯಗಳಲ್ಲಿ ಮುಸ್ಲಿಂ ಸಮುದಾಯದ ಸ್ಥಿತಿ ತೀರಾ ಶೋಚನೀಯವಾಗಿದೆ ಎಂದು ನ್ಯಾಯಮೂರ್ತಿ ರಾಜೀಂದರ್ ಸಾಚಾರ್ ಹೇಳಿದ್ದರು ಎಂದು ತಿಳಿಸಿದರು.

ಸಾಚಾರ್ ದೇಶದಾದ್ಯಂತ ತಿರುಗಾಡಿ ಮಾಹಿತಿ ಸಂಗ್ರಹಿಸಿ, ಅಂಕಿ-ಅಂಶ ಪಡೆದು 2006ರ ಫೆಬ್ರವರಿಯಲ್ಲಿ ವರದಿ ಸಲ್ಲಿಸಿದ್ದರು. ಅದರಲ್ಲಿ ಮುಸ್ಲಿಂ ಸಮುದಾಯದ ಅಭಿವೃದ್ಧಿಗಾಗಿ 76 ಶಿಫಾರಸ್ಸುಗಳನ್ನು ಮಾಡಿದ್ದರು. ನಾಲ್ಕು ಶಿಫಾರಸ್ಸುಗಳನ್ನು ಸರ್ಕಾರ ತಿರಸ್ಕರಿಸಿತ್ತು. ಉಳಿದ 72 ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿತ್ತು. ಆದರೆ ಅದರಲ್ಲಿ 27 ಮಾತ್ರ ಅನುಷ್ಠಾನಕ್ಕೆ ತಂದಿದೆ ಎಂದು ಹೇಳಿದರು.

ಈ ವರದಿಯ ಕಾರಣದಿಂದ ಮುಸ್ಲಿಂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸಿಗಲು ಸಾಧ್ಯವಾಯಿತು. ಗ್ಯಾರೇಜ್, ಫಿಟ್ಟಿಂಗ್ ಸಹಿತ ಹಲವು ಕೌಶಲ್ಯಯುತ ಕೆಲಸಗಳಲ್ಲಿ ಈ ಸಮುದಾಯ ತೊಡಗಿಸಿಕೊಂಡಿದೆ. ಆದರೆ ಅವರು ಯಾರೂ ಅಧಿಕೃತ ತರಬೇತಿ ಪಡೆದವರಲ್ಲ. ಅವರಿಗೆ ತರಬೇತಿ ನೀಡುವ ಯೋಜನೆಯನ್ನು ಸರ್ಕಾರ ಜಾರಿ ಮಾಡಿತು. ಶೇ. 25ರಷ್ಟು ಮುಸ್ಲಿಂ ಜನಸಂಖ್ಯೆ ಇರುವ ಪ್ರದೇಶದಲ್ಲಿ ಶಾಲೆ, ಕಾಲೋನಿ ಅಭಿವೃದ್ಧಿಗೆ ಅವಕಾಶ ನೀಡಲಾಗಿದೆ. ಹೀಗೆ ಮತ್ತಷ್ಟು ಅಭಿವೃದ್ಧಿ ಕಾಣಬೇಕಿದೆ ಎಂದರು.

ಭಾರತೀಯ ಮುಸ್ಲಿಮರ ಸ್ಥಿತಿಗತಿಗಳು–ಸಾಚಾರ್ ವರದಿಯ ಸಾರಾಂಶ ಕೃತಿ ಸಂಗ್ರಹಿಸಿರುವ ರಾಜಾಭಕ್ಷಿ ಹೆಚ್.ವಿ. ಮಾತನಾಡಿ, ಸಾಚಾರ್ ವರದಿ ಸಲ್ಲಿಕೆಯಾಗಿ 15 ವರ್ಷಗಳು ದಾಟಿದವು. ಇನ್ನು 15 ವರ್ಷ ದಾಟಿದರೂ ಸಮುದಾಯ ಸುಧಾರಣೆ ಆಗುವ ಲಕ್ಷಣ ಕಾಣುತ್ತಿಲ್ಲ. ಇಲ್ಲಿಯವರೆಗೆ ನಮ್ಮನ್ನು ಉದ್ಧಾರ ಮಾಡುತ್ತೇವೆ ಎಂದವರು ಆಳುತ್ತಿದ್ದರು. ಈಗ ನಾವು ಬೇಡ ಎನ್ನುವವರೇ ಆಡಳಿತ ಮಾಡುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ನೆರಳು ಬೀಡಿ ಕಾರ್ಮಿಕರ ಯೂನಿಯನ್ ಅಧ್ಯಕ್ಷರಾದ ಜಬೀನಾ ಖಾನಂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಶಿರಿನ್‌ಬಾನು ಸೇರಿದಂತೆ ಇತರರು ಇದ್ದರು. ಕಾರ್ಯದರ್ಶಿ ಎಂ. ಕರಿಬಸಪ್ಪ ನಿರೂಪಿಸಿದರು.

## ಲಿಟಲ್ ಚಾಂಪ್ಸ್ ಶಾಲೆಯಲ್ಲಿ ಗಣರಾಜ್ಯೋತ್ಸವ



ದಾವಣಗೆರೆ, ಜ.27 - ನಿಟುವಳ್ಳಿಯ ಎಚ್.ಕೆ.ಆರ್. ಸರ್ಕಲ್ ಹತ್ತಿರ ಲಿಟಲ್ ಚಾಂಪ್ಸ್ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸವಿತಾ ಹುಲ್ಲುಮನೆ ಗಣೇಶ್, ಕಾಂಗ್ರೆಸ್ ಮುಖಂಡ ಗಣೇಶ್ ಹುಲ್ಲುಮನೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

## ಹರಪನಹಳ್ಳಿ ಆದರ್ಶ ವಿದ್ಯಾಲಯಕ್ಕೆ ಪ್ರವೇಶ

ಹರಪನಹಳ್ಳಿ, ಜ.27- ತಾಲ್ಲೂಕಿನ ಅನಂತನಹಳ್ಳಿ ಬಳಿ ಇರುವ ಆದರ್ಶ ವಿದ್ಯಾಲಯ (ಆರ್‌ಎಂಎಸ್‌ಎ)ದ 6ನೇ ತರಗತಿ ಪ್ರವೇಶ ಪರೀಕ್ಷೆಗಾಗಿ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಇಂದಿನಿಂದ ಬರುವ ಫೆಬ್ರವರಿ 9ರ ವರೆಗೆ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಮುಖ್ಯ ಶಿಕ್ಷಕಿ ಪರ್ವಿನ್ ಬಾನು(9980040561), ಇಸಿಓ ಮಂಜುನಾಥ ಗಿರಜ್ಜಿ(7975534725), ಎಫ್‌ಡಿಎ ದರ್ಶನ್ (9611961461) ಅವರನ್ನು ಸಂಪರ್ಕಿಸಿ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

# ಆಡಳಿತ ಪಕ್ಷದಿಂದ ದೇಶದ ಐಕ್ಯತೆಗೆ ಧಕ್ಕೆ

**ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ**



ದಾವಣಗೆರೆ, ಜ. 27- ಜಿಲ್ಲಾ ಕಾಂಗ್ರೆಸ್ ವತಿಯಿಂದ ಜಿಲ್ಲಾ ಕಾಂಗ್ರೆಸ್ ಕಛೇರಿಯ ಡಾ॥ ಶಾಮನೂರು ಶಿವಶಂಕರಪ್ಪ ಕಾಂಗ್ರೆಸ್ ಭವನದಲ್ಲಿ 73ನೇ ಗಣರಾಜ್ಯೋತ್ಸವ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ದೇಶದ ಎಲ್ಲಾ ಜಾತಿ-ಧರ್ಮಗಳಿಗೆ ಅನ್ವಯವಾಗು ವಂತೆ ಭಾರತ ಸಂವಿಧಾನ ರಚನೆಯಾದರೂ ಸಹ ಇಂದು ಅಧಿಕಾರದಲ್ಲಿರುವ ಕೆಲವರು ಒಂದು ಜಾತಿ-ಧರ್ಮಕ್ಕೆ ಸೀಮಿತವಾಗಿ ಕಾರ್ಯನಿರ್ವಹಿಸುವ ಮೂಲಕ ದೇಶದ ಐಕ್ಯತೆಗೆ ಧಕ್ಕೆ ತರುತ್ತಿದ್ದಾರೆ ಎಂದು ದೂರಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಎಸ್ಸಿ ಘಟಕದ ಅಧ್ಯಕ್ಷ ಬಿ. ಹೆಚ್.ವೀರಭದ್ರಪ್ಪ, ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಗುರುರಾಜ್, ಜಿಲ್ಲಾ ಉಪಾಧ್ಯಕ್ಷ ಹೆಚ್.ಜಯಣ್ಣ, ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಅಯೂಬ್ ಪೈಲ್ವಾನ್, ಕೆ.ಜಿ. ಶಿವಕುಮಾರ್, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯರಾದ ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ಶ್ರೀಮತಿ ಸವಿತಾ ಹುಲ್ಮನಿ ಗಣೇಶ್, ಶ್ರೀಮತಿ ಶಿವಲೀಲಾ ಕೊಟ್ರಯ್ಯ, ಶ್ರೀಮತಿ ಮೀನಾಕ್ಷಿ ಜಗದೀಶ್, ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಹರೀಶ್ ಕೆ.ಎಲ್.ಬಸಾಪುರ, ಜಿಲ್ಲಾ ಸೇವಾದಳದ ಜಿಲ್ಲಾಧ್ಯಕ್ಷ ಚಂದ್ರು ಢೋಲಿ, ಪಂಚಾಯತ್ ರಾಜ್ ಜಿಲ್ಲಾಧ್ಯಕ್ಷ ರಾಘವೇಂದ್ರ ಗೌಡ, ಮಹಿಳಾ ಕಾಂಗ್ರೆಸ್‌ನ ಶ್ರೀಮತಿ ಸುಷ್ಮಾ ಪಾಟೀಲ್, ಶ್ರೀಮತಿ ನಾಗರತ್ನಮ್ಮ, ಶ್ರೀಮತಿ ರಾಜೇಶ್ವರಿ, ಶ್ರೀಮತಿ ಗೀತಾ ಪ್ರಶಾಂತ್, ಶ್ರೀಮತಿ ದ್ರಾಕ್ಷಾಯಣಮ್ಮ, ಶ್ರೀಮತಿ ಆಶಾಮುರುಳಿ, ಶ್ರೀಮತಿ ಕವಿತಾ ಚಂದ್ರಶೇಖರ್, ಶ್ರೀಮತಿ ಶುಭಮಂಗಳ, ಶ್ರೀಮತಿ ಉಮಾದೇವಿ, ಶ್ರೀಮತಿ ಗೀತಾ ಚಂದ್ರಶೇಖರ್, ಕಿಸಾನ್ ಘಟಕದ ಹಾಲೇಶ್, ಸೇವಾದಳ ರಮೇಶ್, ಮುಖಂಡರುಗಳಾದ ಉಮಾಶಂಕರ್, ರಾಕೇಶ್. ಜಿ, ಅಬ್ದುಲ್ ಜಬ್ಬಾರ್, ಮಹ್ಮದ್ ಜಿಕ್ರಿಯಾ, ಸಿದ್ದೇಶ್, ಲಿಯಾಖತ್ ಅಲಿ, ಜಗದೀಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಆಜಾದ್ ಪದ್ಮ ವಿಭೂಷಣಕ್ಕೆ ಮುಂದುವರೆದ 'ಕೈ' ಚಕಮಕಿ

ನವದೆಹಲಿ, ಜ. 27 – ಕಾಂಗ್ರೆಸ್ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರಿಗೆ ಕೇಂದ್ರ ಸರ್ಕಾರ ಪದ್ಮ ವಿಭೂಷಣ ಪ್ರಶಸ್ತಿ ನೀಡಿರುವ ಬಗ್ಗೆ ಕಾಂಗ್ರೆಸ್‌ನಲ್ಲಿ ಪರ ವಿರೋಧಿ ಹೇಳಿಕೆಗಳು ಮುಂದುವರೆದಿವೆ.

ಈ ವಿಷಯದ ಬಗ್ಗೆ ಮಾತನಾಡಿರುವ ಕಾಂಗ್ರೆಸ್ ಹಿರಿಯ ನಾಯಕ ಕರಣ್ ಸಿಂಗ್, ರಾಷ್ಟ್ರೀಯ ಪ್ರಶಸ್ತಿಗಳು ಪಕ್ಷದೊಳಗೆ ವಿವಾದಕ್ಕೆ ಕಾರಣವಾಗಬಾರದು. ನಮ್ಮ ಸಹೋದ್ಯೋಗಿಯೊಬ್ಬರಿಗೆ ಗೌರವ ದೊರೆತರೆ, ನಾವು ಕಹಿ ಹೇಳಿಕೆಗಳನ್ನು ನೀಡದೇ ಮೆಚ್ಚುಗೆ ವ್ಯಕ್ತಪಡಿಸಬೇಕು ಎಂದಿದ್ದಾರೆ.

ಪ್ರಶಸ್ತಿಯ ಬಗ್ಗೆ ಅನಗತ್ಯ ವಿವಾದ ಸೃಷ್ಟಿಸಲಾಗುತ್ತಿದೆ. ಆಜಾದ್ ಅವರು ಪದ್ಮ ಪ್ರಶಸ್ತಿಗೆ ಅರ್ಹರಾಗಿದ್ದಾರೆ ಎಂದು ಸಿಂಗ್ ತಿಳಿಸಿದ್ದಾರೆ.

ಅರ್ಧ ಶತಮಾನದಿಂದ ನನಗೆ ಗುಲಾಂ ನಬಿ ಪರಿಚಯ ಇದೆ. ಆಜಾದ್ ಕಠಿಣ ಪರಿಶ್ರಮದಿಂದ ಉನ್ನತ ಸ್ಥಾನಗಳನ್ನು ಪಡೆದಿದ್ದಾರೆ. ಆಡಳಿತ ಸಾಮರ್ಥ್ಯದಿಂದಾಗಿ ಅವರು ಪಿ.ವಿ. ನರಸಿಂಹರಾವ್ ಹಾಗೂ ಡಾ. ಮನಮೋಹನ್ ಸಿಂಗ್ ಸಂಪುಟದಲ್ಲಿ ಸ್ಥಾನ ಪಡೆದಿದ್ದರು ಎಂದೂ ಸಿಂಗ್ ತಿಳಿಸಿದ್ದಾರೆ.

ಆದರೆ, ಆಜಾದ್ ಪ್ರಶಸ್ತಿ ಪಡೆದಿರುವುದಕ್ಕೆ ಅಸಮಾಧಾನ ಹೊರ ಹಾಕಿರುವ ಕಾಂಗ್ರೆಸ್‌ನ ಇನ್ನೋರ್ವ ಹಿರಿಯ ನಾಯಕ ಎಂ. ವೀರಪ್ಪ ಮೊಯ್ಲಿ, ಸರ್ಕಾರ ಪ್ರಶಸ್ತಿ ನೀಡಲು ನಿರ್ಧರಿಸಿರುವುದರ ಹಿಂದೆ ರಾಜಕೀಯ ಕಾರಣಗಳಿವೆ ಎಂದಿದ್ದಾರೆ.

ನರೇಂದ್ರ ಮೋದಿ ರಾಜಕೀಯ ನಿರ್ಧಾರ ತೆಗೆದುಕೊಂಡಿದ್ದಾರೆ. ಅವರು ಅರ್ಹತೆಯನ್ನಾಗಲೀ, ಮತ್ಯಾವುದೇ ವಿಷಯವನ್ನಾಗಲೀ ನೋಡಿಲ್ಲ. ಪ್ರಶಸ್ತಿ ಸ್ವೀಕರಿಸಬೇಕೇ ಅಥವಾ ತಿರಸ್ಕರಿಸಬೇಕೇ ಎಂಬುದು ಆಜಾದ್ ಅವರಿಗೆ ಬಿಟ್ಟ ವಿಷಯ ಎಂದು ಮೊಯ್ಲಿ ತಿಳಿಸಿದ್ದಾರೆ.

## ಪೀಡನೆಯ ದೂರುಗಳಿಗೆ ಅಸಮಾಧಾನ

(1ನೇ ಪುಟದಿಂದ) ನಡೆಸುವಾಗ ಈ ಟಿಪ್ಪಣಿ ಮಾಡಿದ್ದಾರೆ. ಸುಳ್ಳು ಲೈಂಗಿಕ ಪೀಡನೆ ಹಾಗೂ ಅಪರಾಧಿಕ ಬೆದರಿಕೆ ಆರೋಪಗಳನ್ನು ಮಾಡಿದಾಗ ನಿಜವಾದ ಸಂತ್ರಸ್ತರು ದೂರು ನೀಡಿದಾಗಲೂ ಅನುಮಾನ ಪಡುವಂತಾಗುತ್ತದೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಲೈಂಗಿಕ ಪೀಡನೆಗೆ ಸಂಬಂಧಿಸಿದ ಸೆಕ್ಷನ್ 354ಎ ಹಾಗೂ ಅಪರಾಧಿಕ ಬೆದರಿಕೆಗೆ ಸಂಬಂಧಿಸಿದ ಐ.ಪಿ.ಸಿ. ಸೆಕ್ಷನ್‌ಗಳನ್ನು ಇನ್ನೊಬ್ಬರನ್ನು ಸಿಲುಕಿಸಲು ಬಳಸುವ ಪ್ರಕರಣಗಳು ಬರುತ್ತಿವೆ ಎಂದು ನ್ಯಾಯಾಲಯ ವಿಷಾದಿಸಿದೆ.

ಅಕ್ರಮ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ನೆರೆಹೊರೆಯವರ ನಡುವೆ ವಿವಾದ ಇತ್ತು. ಇದಾದ ನಂತರ ನೆರೆ ಮನೆಯಾತನ ಮೇಲೆ ಲೈಂಗಿಕ ಪೀಡನೆ ಪ್ರಕರಣ ದಾಖಲಿಸಾಗಿತ್ತು. ತನ್ನನ್ನು ಹಾಗೂ ಪತ್ನಿಯನ್ನು ಬೆದರಿಸಲಾಗುತ್ತಿದೆ ಎಂದು ನೆರೆ ಮನೆಯ ವ್ಯಕ್ತಿ ದೂರು ನೀಡಿದ್ದ.

ವಿಚಾರಣೆ ನಡೆಸಿದಾಗ ಆರೋಪಗಳಲ್ಲಿ ಹುರುಳಿಲ್ಲ ಎಂಬುದು ಕಂಡು ಬಂದಿತ್ತು. ಆರೋಪ ಮಾಡಿದ ದಂಪತಿ ತದ್ವಿರುದ್ಧ ಹೇಳಿಕೆಗಳನ್ನು ನೀಡಿದ್ದರು.


### ಸಾರ್ವಜನಿಕ ಪ್ರಕಟಣೆ

ಡಿ.ಕೆ. ರೂಪ ಮತ್ತು ಗಂಡ ದುರುಗಪ್ಪ ಹನುಮಂತಪ್ಪ ಕಂಡ್ರಳ್ಳಿ, ವಯಸ್ಸು 38 ವರ್ಷ, ವಾಸ: #1966/78, ಎಸ್.ಎಸ್. ಬಡಾವಣೆ, ದಾವಣಗೆರೆ ಮೊ.ನಂ. 91102 07008 ವಾಸಿಯಾದ ನಾನು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:- ಮೇಲ್ಕಂಡ ನಾನು ಮತ್ತು ನನ್ನ ಗಂಡ ದುರುಗಪ್ಪ ಹನುಮಂತಪ್ಪ ಕಂಡ್ರಳಿ ಷೆಡ್ಯೂಲ್ ಸ್ವತ್ತಿನ ಮಾಲೀಕರುಗಳಾಗಿದ್ದು, ನನ್ನ ಗಂಡ ದುರುಗಪ್ಪ ಇವರು ಇತ್ತೀಚೆಗೆ ಮರಣ ಹೊಂದಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಹಿಂದಿನ ಕ್ರಯಪತ್ರವಾದ ದಿನಾಂಕ : 07.02.1987 ಎಸ್.ಆರ್ ನಂ. 5583/1986-87ರ ಕ್ರಯಪತ್ರದ ಅಸಲು ದಾಖಲೆಯು ದಿನಾಂಕ 20.01.2022ರಂದು ದಾವಣಗೆರೆ ಶಾಮನೂರು ರಸ್ತೆ ಬಳಿ ಇರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಸಲು ಅಂಗಡಿಗೆ ಹೋದಾಗ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಸದರಿ ಅಸಲು ಕ್ರಯಪತ್ರವು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನನ್ನನ್ನು ಸಂಪರ್ಕಿಸಿ ಅದನ್ನು ನನಗೆ ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

**ಷೆಡ್ಯೂಲ್:** ದಾವಣಗೆರೆ ತಾಲ್ಲೂಕು ಉಪನೋಂದಣಾಧಿಕಾರಿಗಳ ಕಚೇರಿ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ರಿ. ಸರ್ವೆ ನಂ. 86/5ರಲ್ಲಿ ವಾಸೋಪಯೋಗಕ್ಕೆ ಅಲಿನೇಷನ್ ಆಗಿರುವ ಪ್ರದೇಶದಲ್ಲಿ ವಿಂಗಡಿಸಿರುವ ಸೈಟ್‌ಗಳ ಪೈಕಿ ಸೈಟ್ ನಂ. 78, ಚಾಲ್ತಿ ಡೋರ್ ನಂ. 1966/78, ವಿಸ್ತೀರ್ಣ 40x50 ವಾಸದ ಮನೆ ಚಕ್ಕುಬಂದಿ:- ಪೂರ್ವ : ರಸ್ತೆ, ಪಶ್ಚಿಮ : ಸರ್ವೆ ನಂ. 87ರ ಸ್ವತ್ತು, ಉತ್ತರ : ಸೈಟ್ ನಂ. 79, ದಕ್ಷಿಣ : ಸೈಟ್ ನಂ. 77. ಈ ಮಧ್ಯೆ ಇರುವ ಸ್ವತ್ತು

ಸಹಿ/- **ಡಿ.ಕೆ. ರೂಪ**


# ಪ್ರಗತಿಯಾಗದ ಜನಸಾಮಾನ್ಯರ ಬದುಕು



**ಬಸವ ಪ್ರಭು ಶ್ರೀ ವ್ಯಾಕುಲತೆ**

ದಾವಣಗೆರೆ, ಜ. 27- ಸಂವಿಧಾನ ಜಾರಿಗೆ ಬಂದು 73 ವರ್ಷಗಳು ತುಂಬಿದವು. ಆದರೆ ಜನಸಾಮಾನ್ಯರ ಬದುಕು ಮಾತ್ರ ಪ್ರಗತಿಯಾಗಿಲ್ಲ ಎಂದು ಶ್ರೀ ಬಸವಪ್ರಭು ಸ್ವಾಮೀಜಿ ವಿಷಾದಿಸಿದ್ದಾರೆ.

ನಗರದ ವಿರಕ್ತ ಮಠದಲ್ಲಿ ಡಾ. ಶಿಮುಶ ಸಂಯುಕ್ತ ಪದವಿ ಪೂರ್ವ ಕಾಲೇಜು ಮತ್ತು ಎಸ್‌ಜೆಎಂ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದ ಧ್ವಜಾರೋಹಣ ನೆರವೇರಿಸಿ ಶ್ರೀಗಳು ಆಶೀರ್ವಚನ ನೀಡಿದರು. ರಾಷ್ಟ್ರದ ಧರ್ಮಗ್ರಂಥ ಸಂವಿಧಾನವಾಗಿದೆ. ಸಂವಿಧಾನದ ತತ್ವಗಳು ನಮ್ಮ ಬದುಕಿನ ವಿಧಾನಗಳಾಗಬೇಕು. ಸರ್ವರಿಗೂ ಸಮಪಾಲು ಸಿಗಬೇಕು. ಅದಕ್ಕಾಗಿ ಎಲ್ಲರೂ ಒಪ್ಪುವಂತೆ ಬದುಕನ್ನು ಕಂಡುಕೊಂಡು ನಾವೆಲ್ಲರೂ ಒಂದೇ ಎಂಬ ಭಾವನೆಯಲ್ಲಿ ಕೆಲಸ ಮಾಡಬೇಕು ಎಂದು ಶ್ರೀಗಳು ತಿಳಿಸಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಕಣಕುಪ್ಪಿ ಮುರುಗೇಶಪ್ಪ, ಹಾಸಬಾವಿ ಕರಿಬಸಪ್ಪ, ಲಂಬಿ ಮುರುಗೇಶ್, ಕುಮಾರಸ್ವಾಮಿ, ಮುಖ್ಯ ಶಿಕ್ಷಕರಾದ ರೋಷನ್ ಮತ್ತು ಇತರರು ಉಪಸ್ಥಿತರಿದ್ದರು.

## ಹರಿಹರ : ವಸತಿ ಯೋಜನೆಗೆ ಅರ್ಜಿ

ಹರಿಹರ, ಜ.27- ಹರಿಹರ ನಗರ ವ್ಯಾಪ್ತಿಯಲ್ಲಿ ವಾಜಪೇಯಿ ನಗರ ವಸತಿ ಯೋಜನೆಯಡಿ ರಾಜೀವ್ ಗಾಂಧಿ ವಸತಿ ನಿಗಮವು ಸಾಮಾನ್ಯ ವರ್ಗದವರಿಗೆ 66 ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ 10 ಸೇರಿದಂತೆ ಒಟ್ಟು 76 ಮನೆಗಳ ಗುರಿಯನ್ನು ನಿಗದಿಪಡಿಸಿದ್ದು, ಅರ್ಹ ಫಲಾನುಭವಿಗಳು ಇದೇ ದಿನಾಂಕ 31 ರೊಳಗೆ ನಗರಸಭೆಗೆ ಅರ್ಜಿ ಸಲ್ಲಿಸಬಹುದು.

ಖಾಲಿ ನಿವೇಶನ ಹೊಂದಿರಬೇಕು, ಕುಟುಂಬದ ವಾರ್ಷಿಕ ಆದಾಯ 87,600/- ಮೀರಿರಬಾರದು. ಗುಡಿಸಲು ವಾಸಿಗಳು, ತಾತ್ಕಾಲಿಕ ಶೆಡ್, ಶಿಥಿಲಗೊಂಡ ಮನೆ, ಕಚ್ಚಾ ಮನೆಗಳಲ್ಲಿ ವಾಸಿಸುತ್ತಿರುವವರು, ಒಂದು ಕೋಣೆಯಿಲ್ಲದ 4 ಕ್ಕಿಂತ ಹೆಚ್ಚು ಸದಸ್ಯರುಳ್ಳ ಕುಟುಂಬದವರು ಮಾತ್ರ ಅರ್ಹರು.

ವಿವರಕ್ಕೆ ಕಛೇರಿಯ ಆಶ್ರಯ ಶಾಖೆಯ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

## ಮಕ್ಕಳ ಫೋಟೋ ಸ್ಪರ್ಧೆ

ದಾವಣಗೆರೆ, ಜ. 27- ನಗರದ ಕಲಾಕುಂಚದ ಆಶ್ರಯದಲ್ಲಿ ರಾಜ್ಯ ಮಟ್ಟದ ಉಚಿತ ಮಕ್ಕಳ ಫೋಟೋ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಿ.ಬಿ.ಲೋಕೇಶ್ ತಿಳಿಸಿದ್ದಾರೆ. ಐದು ವರ್ಷ ಮೇಲ್ಪಟ್ಟ ಹದಿನೈದು ವರ್ಷ ದೊಳಗಿನ ಮಕ್ಕಳು ನಮ್ಮ ಸಾಂಪ್ರದಾಯಿಕ ಉಡುಗೆ, ತೊಡುಗೆಯೊಂದಿಗೆ ಒಂದು ಫೋಟೋವನ್ನು ತಮ್ಮ ಮೊಬೈಲ್‌ನಲ್ಲಿ ತೆಗೆದು ಇದೇ ದಿನಾಂಕ 31ರೊಳಗೆ 9538732777 ನಂಬರ್‌ಗೆ ಕಳುಹಿಸಬಹುದು. ವಿವರಕ್ಕೆ ಸಂಪರ್ಕಿಸಿ : 99011 22728.

## ಮಲೇಬೆನ್ನೂರು : ಅರ್ಜಿ ಆಹ್ವಾನ

ಮಲೇಬೆನ್ನೂರು, ಜ.27- ಮಲೇಬೆನ್ನೂರು ಪುರಸಭೆ ವ್ಯಾಪ್ತಿಯಲ್ಲಿ ವಾಜಪೇಯಿ ನಗರ ವಸತಿ ಯೋಜನೆಯಡಿ ರಾಜೀವ್ ಗಾಂಧಿ ವಸತಿ ನಿಗಮವು ಸಾಮಾನ್ಯ ವರ್ಗದವರಿಗೆ 49 ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ 57 ಸೇರಿದಂತೆ ಒಟ್ಟು 106 ಮನೆಗಳ ಗುರಿಯನ್ನು ನಿಗದಿಪಡಿಸಿದ್ದು, ಅರ್ಹ ಫಲಾನುಭವಿಗಳು ಇದೇ ದಿನಾಂಕ 31 ರ ಒಳಗೆ ಪುರಸಭೆಗೆ ಅರ್ಜಿ ಸಲ್ಲಿಸಬಹುದು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ. ಕಾಲೋನಿ, ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ ಹಾಗು ಇಎಸ್ಐ ಆಸ್ಪತ್ರೆ, ಕೆ.ಟಿ.ಜೆ ನಗರ ಪೋಲಿಸ್ ಠಾಣೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಓದುಗರ ಪತ್ರಗಳು

### ಫುಟ್‌ಪಾತ್ ತೆರವುಗೊಳಿಸಿ

ಮಾನ್ಯರೇ,

ನಗರದಲ್ಲಿ ಹೊಸ ಬಸ್ ನಿಲ್ದಾಣಗಳ ಕಾಮಗಾರಿ ನಡೆಯುತ್ತಿದೆ. ನೂತನ ಬಸ್ ನಿಲ್ದಾಣ ಕಾಮಗಾರಿ ಮುಗಿಯುವವರೆಗೆ ಬಸ್ ತಂಗುದಾಣವನ್ನು ಹೈಸ್ಕೂಲ್ ಮೈದಾನಕ್ಕೆ ವರ್ಗಾಯಿಸಲಾಗಿದೆ.

ಮಹಾನಗರ ಪಾಲಿಕೆ ಮತ್ತು ಹೈಸ್ಕೂಲ್ ಮೈದಾನದ ಪಕ್ಕದ ರಸ್ತೆಯ ಫುಟ್‌ಪಾತ್ ವ್ಯಾಪಾರಿಗಳಿಂದ ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ತಾತ್ಕಾಲಿಕವಾಗಿ ಫುಟ್‌ಪಾತ್ ವ್ಯಾಪಾರವನ್ನು ತೆರವುಗೊಳಿಸಬೇಕಾಗಿದೆ. ಜನರು ಹಾಗೂ ವಾಹನ ಸಂಚಾರಿಗಳಿಗೆ ಅಪಾಯ ಎದುರಾಗುವ ಮುಂಚೆ ಅಧಿಕಾರಿಗಳು ಫುಟ್‌ಪಾತ್‌ಗಳನ್ನು ತೆರವುಗೊಳಿಸಿ.

**- ಜಿ.ಎಂ. ಕರಿಬಸಪ್ಪ**

### ಯಾರಿಗೂ ಕಾಣದಾದ ಶಿವಪಾರ್ವತಿ ಬಡಾವಣೆ

ಮಾನ್ಯರೇ,

ಶಿವಪಾರ್ವತಿ ಬಡಾವಣೆಯಲ್ಲಿ ವಿದ್ಯುತ್ ಇಲ್ಲ, ನೀರು ಇಲ್ಲ, ಒಳಚರಂಡಿ ಸಂಪರ್ಕ ಇಲ್ಲ, ಶಾಮನೂರು ಮೇನ್ ನಿಂದ ಶಿರಮಗೊಂಡನಹಳ್ಳಿಗೆ ಹೋಗುವ ರಸ್ತೆಯೂ ಇಲ್ಲ. ಶಾಸಕರು, ಪಾಲಿಕೆ ಸದಸ್ಯರು ಕಾಣುತ್ತಾ ಇಲ್ಲ. ಆದ್ದರಿಂದ 41ನೇ ವಾರ್ಡ್ ಗೆ ಸಂಬಂಧಿಸಿದ ಅಧಿಕಾರಿಗಳು ಭೇಟಿ ಕೊಟ್ಟು ಕೆಲಸಗಳನ್ನು ಮಾಡಿಕೊಡಬೇಕಾಗಿ ವಿನಂತಿ.

**- ಮಾಲತೇಶ**

# ಶಾಶ್ವತ ಕುಡಿವ ನೀರು ಸೌಲಭ್ಯ ಕಲ್ಪಿಸಿ

(1ನೇ ಪುಟದಿಂದ) ಮಾಡಬೇಕು. ರಾಣಿ ಚೆನ್ನಮ್ಮ ವೃತ್ತ, ಮತ್ತು ಶಿವಮೊಗ್ಗ ರಸ್ತೆಯಲ್ಲಿ ಸಿಗ್ನಲ್ ಅಳವಡಿಸಬೇಕು. ನಗರಸಭೆಯಿಂದ ಸಾರ್ವಜನಿಕರಿಗೆ ಬೇಗನೆ ಸೌಲಭ್ಯಗಳು ನೀಡಲು ವ್ಯವಸ್ಥೆ ಆಗಬೇಕು ಮತ್ತು ಪತ್ರಕರ್ತರ ಭವನಕ್ಕೆ ಬಾಡಿಗೆ ನಿಗದಿ ಮಾಡಿ ಪತ್ರಕರ್ತರಿಗೆ ಕಟ್ಟಡ ನೀಡಬೇಕು ಎಂದು ಹೇಳಿದರು.

ಪೌರಾಯುಕ್ತರಾದ ಎಸ್. ಲಕ್ಷ್ಮಿ ಮಾತನಾಡಿ, ವಿದ್ಯುತ್ ದೀಪಗಳ ಅಳವಡಿಕೆಗೆ 16 ಲಕ್ಷ ರೂ. ತೆಗೆದಿರಿಸಲಾಗಿದೆ ಮತ್ತು 4 ಲಕ್ಷ ರೂ.ಗಳ ಜನರಲ್ ಫಂಡ್ ಕ್ರಿಯಾ ಯೋಜನೆ ಬಾಕಿ ಇದೆ. ಆ ಹಣ ಬಿಡುಗಡೆ ಆದ ತಕ್ಷಣವೇ ಎಲ್ಲಾ ವಾರ್ಡುಗಳಲ್ಲಿ ವಿದ್ಯುತ್ ದೀಪ ಅಳವಡಿಸಲಾಗುತ್ತದೆ ಎಂದರು.

ನಗರಸಭೆಗೆ ಅತಿ ಶೀಘ್ರದಲ್ಲಿ 30 ಕೋಟಿ ರೂ. ಅನುದಾನ ಬರಲಿದೆ. ಆ ಹಣವನ್ನು ಯಾವ ಅಭಿವೃದ್ಧಿ ಕೆಲಸಕ್ಕೆ ಬಳಕೆ ಮಾಡಬೇಕು ಎಂಬುದನ್ನು ಶಾಸಕರ ಗಮನಕ್ಕೆ ತಂದು ಉತ್ತಮ ಕೆಲಸಕ್ಕೆ ಬಳಕೆ ಮಾಡಲಾಗುತ್ತದೆ ಎಂದು ಹೇಳಿದರು.

ಅಭಿಷೇಕ್ ಮಾತನಾಡಿ, ವಿಜಯನಗರ ಬಡಾವಣೆಯಲ್ಲಿ ಮನೆಗಳಿಗೆ ಮಳೆ ನೀರು ನುಗ್ಗುತ್ತದೆ. ಇದನ್ನು ತಡೆಯಲು ರಸ್ತೆ ನಿರ್ಮಾಣ ಮಾಡಿ ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಎಂದು ಹೇಳಿದರು.

ಯಲ್ಲಪ್ಪ ಮಾತನಾಡಿ, 24x7 ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಕಳೆದ 11 ತಿಂಗಳಾಗಿದೆ. ಆದರೆ ಇದುವರೆಗೂ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿಲ್ಲ ಎಂದರು.

ಮಾರುತಿ ಬೇಡರ್ ಮಾತನಾಡಿ, ನಗರೋತ್ಥಾನ ಕ್ರಿಯಾ ಯೋಜನೆ ಬೇಗನೆ ಸಿದ್ಧ ಮಾಡಿ. ಕಳೆದ ಸಾಲಿನಲ್ಲಿ 8 ಕೋಟಿ ರೂ. ಹಣ ಬಿಡುಗಡೆ ಆಗಿದ್ದರೂ ಕಾಮಗಾರಿ ಆಗದೇ ಇರುವುದರಿಂದ ಹಣ ವಾಪಸ್ ಹೋಗುವಂತಾಗಿದೆ. ಈಗ ವಿಳಂಬವಾಗಿ 30 ಕೋಟಿ ರೂ. ಹಣ ವಾಪಸ್ ಹೋಗುವಂತೆ ಆಗಬಾರದು ಎಂದರು.

ನಾಗರತ್ನ ಮಾತನಾಡಿ, ನಗರದ ಅಂಡರ್ ಬ್ರಿಡ್ಜ್ ನಲ್ಲಿ ಸಾರ್ವಜನಿಕರು ಓಡಾಡಲು ಬಹಳ ತೊಂದರೆ ಆಗುತ್ತದೆ. ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು.

ಈ ವೇಳೆ ನಗರಸಭೆ ಉಪಾಧ್ಯಕ್ಷ ಬಾಬುಲಾಲ್, ಸದಸ್ಯರಾದ ಗುತ್ತೂರು ಜಂಬಣ್ಣ, ದಾದಾ ಖಲಂದರ್, ಸಾವಿತ್ರಮ್ಮ ಹನುಮಂತಪ್ಪ, ಕೆ.ಜಿ. ಸಿದ್ದೇಶ್ ಅಶ್ವಿನಿ ಕೃಷ್ಣ, ದಿನೇಶ್ ಬಾಬು ಆರ್.ಸಿ. ಜಾವೇದ್, ಮುಖಂಡರಾದ ಆರ್. ರಾಘವೇಂದ್ರ, ದಾದಾಪೀರ್ ಭಾನುವಳ್ಳಿ, ಮನ್ಸೂರು ಮದ್ದಿ, ಹಬೀಬ್, ಮೋಹನ್ ದುರುಗೋಜಿ, ಜಾಕೀರ್, ಪತ್ರಕರ್ತರಾದ ಎಂ. ಚಿದಾನಂದ ಕಂಚಿಕೇರಿ, ಕೆ. ಜೈಮುನಿ. ಹೆಚ್. ಸುಧಾಕರ, ವಿಶ್ವನಾಥ್ ಮೈಲಾಳ ಮತ್ತಿತರರು ಮಾತನಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಪಕ್ಕೀರಮ್ಮ, ನಿಂಬಕ್ಕ ಚಂದಾಪೂರ್, ಶಾಹಿದಾ ಸನಾವುಲ್ಲಾ, ನಗರಸಭೆ ಎಇಇ ಬಿರಾದಾರ, ಇಂಜಿನಿಯರ್ ಮಂಜುನಾಥ್ ಉಪಸ್ಥಿತರಿದ್ದರು.

## ಜೆಡಿಎಸ್‌ಗೆ ಸ್ವಾಗತ

(1ನೇ ಪುಟದಿಂದ) ಬಂದರೆ ಸ್ವಾಗತ. ನಾವು ಕದ್ದುಮುಚ್ಚಿ ಯಾವುದನ್ನೂ ಮಾಡಿಲ್ಲ. ಇಂದೂ ಕೂಡ ನಾನು ಕರೆ ಮಾಡಿ ಮಾತಾಡಿದ್ದೇನೆ. ಅವರು ನಮ್ಮ ಪಕ್ಷಕ್ಕೆ ಬಂದರೆ ಸೂಕ್ತ ಸ್ಥಾನಮಾನ ಕೊಡುತ್ತೇವೆ ಎಂದು ಹೇಳಿದ್ದಾರೆ.

ಇಬ್ರಾಹಿಂ ಹಿರಿಯರಿದ್ದಾರೆ. ನಮ್ಮ ಪಕ್ಷ ಹಾಗೂ ಮಾಜಿ ಪ್ರಧಾನಿಗಳಾದ ದೇವೇಗೌಡರ ಏಳುಬೀಳಿನಲ್ಲಿಯೂ ಜತೆಯಾದವರು. ಮೇಲ್ಮನೆ ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಅವರ ಹೆಸರು ಕೇಳಿ ಬಂದಿತ್ತು. ಆ ಸ್ಥಾನ ಸಿಕ್ಕಿದರೆ ಉಪಯೋಗ ಮಾಡಿಕೊಳ್ಳಿ. ನಿಮ್ಮನ್ನು ದುರುಪಯೋಗ ಪಡಿಸಿಕೊಳ್ಳಲ್ಲ ಎಂದು ಅವರಿಗೆ ಹೇಳಿದ್ದೆ. ಆದರೆ ಅಲ್ಲಿ ಅವರಿಗೆ ಆ ಸ್ಥಾನ ತಪ್ಪಿದೆ ಎಂದು ಕುಮಾರಸ್ವಾಮಿ ತಿಳಸಿದ್ದಾರೆ.

ಜನತಾ ಪರಿವಾರದ ನಾಯಕರು ಬೇರೆ ಬೇರೆ ಕಡೆ ಸೆಟ್ಲ್ ಆಗಿದ್ದಾರೆ. ಅವರನ್ನು ವಾಪಸ್ ತರುವ ನಿರೀಕ್ಷೆ ಇಟ್ಟುಕೊಂಡಿಲ್ಲ. ಯುವ ನಾಯಕತ್ವ ತರುವ ನಿಟ್ಟಿನಲ್ಲಿ ಚಿಂತಿಸಲಾಗುತ್ತಿದೆ. ಹೊಸ ನಾಯಕರಿಗೆ ಜವಾಬ್ದಾರಿ ನೀಡಲಾಗುತ್ತಿದೆ. ಹೊಸ ನಾಯಕರ ಸೃಷ್ಟಿ ನಮ್ಮ ಆದ್ಯತೆ ಎಂದೂ ಅವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ಮೊದಲಿನಿಂದಲೂ ಜೆಡಿಎಸ್ ಗುರು ಮನೆ ಇದ್ದಂತೆ. ಹಲವಾರು ಜನ ಇಲ್ಲಿಂದ ನಾಯಕರಾಗಿ ಬೆಳೆದು ಹೋಗಿದ್ದಾರೆ ಎಂದೂ ಅವರು ಹೇಳಿದ್ದಾರೆ.


### ಸಾರ್ವಜನಿಕ ತಿಳುವಳಿಕೆ ನೋಟೀಸು

ಇದರಲ್ಲಿ ಶ್ರೀ ಬಿ.ಎನ್. ಕಾವಲಿ ನ್ಯಾಯವಾದಿಗಳು ಶಿರನಹಳ್ಳಿ ತಾಲ್ಲೂಕು ಮುಂಡರಗಿ ಜಿ॥ ಗದಗ ಇವರು ನಮ್ಮ ಪಕ್ಷಗಾರರು ಕೊಟ್ಟ ಮಾಹಿತಿ ವ. ಅಧಿಕಾರದ ಮೇಲಿಂದ ಈ ಮೂಲಕ ಯಾವತ್ತೂ ಸಾರ್ವಜನಿಕರಿಗೆ ಕೊಡುವ ತಿಳುವಳಿಕೆ ನೋಟೀಸು ಏನೆಂದರೆ.

1) ಶ್ರೀಮತಿ ಸುಶೀಲಮ್ಮ ಕೋಂ ರುದ್ರಪ್ಪ ಜಿ. @ ಸುಶೀಲಾ ತಂದೆ ಚನ್ನಬಸಪ್ಪ ಸಾ॥ ದುಗ್ಗಾವತಿ ತಾ॥ ಹರಪನಹಳ್ಳಿ, ಜಿಲ್ಲಾ: ವಿಜಯನಗರ ಇವರು ಈ ಕೆಳಕಂಡ ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲ್ಲೂಕು ತೆಲಗಿ ಹೋಬಳಿಯ ದುಗ್ಗಾವತಿ ಹಾಗೂ ಶಿರಗಾನಹಳ್ಳಿ ಗ್ರಾಮದ ಶೇತ್ಕಿ ಜಮೀನುಗಳು ಮತ್ತು ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ದೊಡ್ಡಬೂದಿಹಾಳ ಗ್ರಾಮದ ಶೇತ್ಕಿ ಜಮೀನುಗಳ ಮೇಲೆ ನಮ್ಮ ಪಕ್ಷಗಾರರಿಗೆ ಹಕ್ಕು ಇರುವುದರಿಂದ ಸದರಿ ಆಸ್ತಿಗಳ ಮೇಲೆ ಸಾರ್ವಜನಿಕ ನೋಟಿಸ್ ನೀಡಲು ಕಾರಣವೇನೆಂದರೆ.

ಸದರ ಆಸ್ತಿಗಳ ಮೇಲೆ ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹರಪನಹಳ್ಳಿ ಇವರಲ್ಲಿ ಅಸಲು ದಾವಾ ನಂ. 171/2019 ಅಂತಾ ದಾವೆಯು ಚಾಲ್ತಿಯಲ್ಲಿದ್ದು, ಸದರಿ ದಾವೆಯು ಸಲ್ಲಿಸುವ ಕಾಲಕ್ಕೆ ಸದರಿ ದಾವಾದ ಪ್ರತಿವಾದಿಗಳಾದ 1) ಸರೋಜಮ್ಮ ಕೋಂ. ರೇವಣಸಿದ್ದಪ್ಪ ಬಣಕಾರ 2) ಮಾಲತೇಶ ತಂದೆ ರೇವಣಸಿದ್ದಪ್ಪ ಬಣಕಾರ 3) ಗಿರಿಜವ್ವ ಕೋಂ. ಶಿವನಾಗಪ್ಪ ಬಣಕಾರ 4) ರಮೇಶ ತಂದೆ ಶಿವನಾಗಪ್ಪ ಬಣಕಾರ 5) ಶಿವರಾಜ ತಂದೆ ರೇವಣಸಿದ್ದಪ್ಪ ಬಣಕಾರ 6) ಮಂಜುನಾಥ ತಂದೆ ರೇವಣಸಿದ್ದಪ್ಪ ಬಣಕಾರ ಇವರುಗಳ ಮೇಲೆ ದಾವಾ ಆಸ್ತಿಗಳ ಮೇಲೆ ಯಾವುದೇ ಬೋಜಾ ಹಾಗೂ ಮಾರಾಟ ಮಾಡದಂತೆ ಮತ್ತು ಹಕ್ಕು ಬದಲಾವಣೆಯನ್ನು ಮಾಡದಂತೆ ದಾವಾ ನಿಖಾಲಿಯಾಗುವವರೆಗೂ ಮಧ್ಯಂತರ ತಾಕೀತಿ ಆದೇಶವನ್ನು ಕೋರಿದ್ದು, ಸದರಿ ಮಧ್ಯಂತರ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ಸ್ವೀಕರಿಸಿ, ದಾವಾ ನಿಖಾಲಿಯಾಗುವವರೆಗೂ ದಾವಾ ಆಸ್ತಿಗಳನ್ನು ಯಾವುದೇ ರೀತಿಯಲ್ಲಿ ಮಾರಾಟ ವ. ಹಕ್ಕು ಬದಲಾವಣೆಯನ್ನು ಮಾಡಬಾರದು ಅಂತಾ ಮಾನ್ಯ ನ್ಯಾಯಾಲಯವು ಆದೇಶ ಮಾಡಿದ್ದು ಇರುತ್ತದೆ. ಸದರಿ ಪ್ರಕರಣದಲ್ಲಿ ನಮ್ಮ ಪಕ್ಷಗಾರರು 15ನೇ ಪ್ರತಿವಾದಿಯಾಗಿರುತ್ತಾರೆ. ಸದರಿ ಆಸ್ತಿಗಳ ವಿವರ ಈ ಕೆಳಗಿನಂತಿರುತ್ತದೆ. ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲ್ಲೂಕು ತೆಲಿಗೆ ಹೋಬಳಿಯ ದುಗ್ಗಾವತಿ ಗ್ರಾಮದ ರಿ.ಸ.ನಂ. 145/1, 160/ಸಿ, 190/3, 190/4, 191/ಬಿ, 137/1ಬಿ, 105/ಬಿ, 132/ಎ1, 101/ಸಿ1, 100/ಸಿ, 72/ಬಿ1ಎ2, 72/ಬಿ1ಎ1, 157/21, 160/*, 101/ಎ1, 101/ಎ2, ಹಾಗೂ ಶಿರಗಾನಹಳ್ಳಿ ಗ್ರಾಮದ ರಿ.ಸ.ನಂ. 02/ಎ6, 134/1, 134/2, 135/ಬಿ ಹಾಗೂ ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ದೊಡ್ಡಬೂದಿಹಾಳ ಗ್ರಾಮದ ರಿ.ಸ.ನಂ. 75/2, 1 ಎಕರೆ 20 ಗುಂಟೆ ಆಕಾರ 02.85, ಈ ಮೇಲ್ಕಾಣಿಸಿದಂತೆ ದಾವಾ ಜಮೀನುಗಳಿರುತ್ತವೆ.

ಸದರಿ ನಮ್ಮ ಪಕ್ಷಗಾರರಿಗೆ ಈ ದಾವಾ ಆಸ್ತಿಗಳಲ್ಲಿ ಹಕ್ಕು ಇರುವುದರಿಂದ ಸದರ ಆಸ್ತಿಗಳನ್ನು ಈ ಮೇಲ್ಕಾಣಿಸಿದ ಪ್ರತಿವಾದಿಯರು ಮಾರಾಟ ಮಾಡುವ ಹುನ್ನಾರವನ್ನು ಹೊಂದಿರುತ್ತಾರೆ ಅಂತಾ ಐಲಿ ಕಡೆಯಿಂದ ತಿಳಿದುಬಂದಿದ್ದು ಇರುತ್ತದೆ. ಆದ್ದರಿಂದ ಸದರಿ ಆಸ್ತಿಗಳನ್ನು ಯಾರಾದರೂ, ಯಾವಾಗಾದರೂ ಮಾರಾಟಕ್ಕೆ ಪಡೆಯಬಾರದು ಹಾಗೂ ಯಾವುದೇ ವ್ಯವಹಾರವನ್ನು ಮಾಡಬಾರದು. ಒಂದು ವೇಳೆ ವ್ಯವಹಾರವನ್ನು ಮಾಡಿದ್ದಲ್ಲಿ, ತಾವೇ ಮುಂದಿನ ಕಾನೂನು ಪ್ರಕ್ರಿಯೆಗೆ ತಾವೇ ಹೊಣೆಗಾರರು ಇರುತ್ತೀರಿ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು.

**ಸ್ಥಳ : ದಾವಣಗೆರೆ.** **ಸಹಿ/- ಶ್ರೀ ಬಿ.ಎನ್. ಕಾವಲಿ**

**ದಿನಾಂಕ : 27.01.2022** **ನ್ಯಾಯವಾದಿಗಳು, ಮೊ. : 95911 73552**

# ಎಂಇಎಸ್ ಪುಂಡರ ದೌರ್ಜನ್ಯಕ್ಕೆ ತಕ್ಕ ಉತ್ತರ ನೀಡಿದ ದಿಟ್ಟ ಕನ್ನಡತಿ ಚಿಂದೋಡಿ ಲೀಲಾ



ಚಿಂದೋಡಿ ಲೀಲಾ ಅವರ 12ನೇ ವರ್ಷದ ಸ್ಮರಣೋತ್ಸವದಲ್ಲಿ ಹಿರಿಯ ಪತ್ರಕರ್ತ ಬಸವರಾಜ ಐರಣಿ ಮೆಚ್ಚುಗೆ

ದಾವಣಗೆರೆ, ಜ. 27- ಮರಾಠಿಗರ ಪ್ರಾಬಲ್ಯವಿರುವ ಬೆಳಗಾವಿಯ ಗಡಿ ಭಾಗದ ಊರುಗಳಲ್ಲಿ ಯಶಸ್ವಿಯಾಗಿ ನಾಟಕ ಪ್ರದರ್ಶನ ನಡೆಸುವ ಮೂಲಕ ಎಂಇಎಸ್ ಪುಂಡರ ದೌರ್ಜನ್ಯಕ್ಕೆ ತಕ್ಕ ಉತ್ತರ ನೀಡಿದ ದಿಟ್ಟ ಕನ್ನಡತಿ ಚಿಂದೋಡಿ ಲೀಲಾ ಎಂದು ಹಿರಿಯ ಪತ್ರಕರ್ತ ಐರಣಿ ಬಸವರಾಜ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಎಂಸಿಸಿ 'ಬಿ' ಬ್ಲಾಕ್‌ನ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಪದ್ಮಶ್ರೀ ಚಿಂದೋಡಿ ಲೀಲಾ ಟ್ರಸ್ಟ್ ವತಿಯಿಂದ ಮೊನ್ನೆ ಹಮ್ಮಿಕೊಂಡಿದ್ದ ಚಿಂದೋಡಿ ಲೀಲಾ ಅವರ 12ನೇ ವರ್ಷದ ರಂಗ ಸ್ಮರಣೆ ಹಾಗೂ ರಂಗಭೂಮಿ ಕಲಾವಿದರಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಎಂಇಎಸ್ ಬೆದರಿಕೆಗೆ ಜಗ್ಗದೆ, ನಾಟಕ ಪ್ರದರ್ಶಿಸುವ ಜೊತೆಗೆ ಬೆಳಗಾವಿಯಲ್ಲಿ ರಂಗ ಮಂದಿರ ನಿರ್ಮಿಸಿದ ಚಿಂದೋಡಿ ಲೀಲಾ ಅವರನ್ನು ಅಭಿನಯ ಕಿತ್ತೂರು ಚೆನ್ನಮ್ಮ ಎಂದು ಕರೆದಿದ್ದರು ಎಂದು ಅವರು ಸ್ಮರಿಸಿದರು.

ನಾಡು ಕಂಡ ಒಬ್ಬ ಪ್ರಬುದ್ಧ ಅಭಿನೇತ್ರಿಯಾಗಿದ್ದ ಚಿಂದೋಡಿ ಲೀಲಾ, ನಾಟಕ ಕಲೆ ಮೂಲಕ ಕನ್ನಡ ನುಡಿ ಸೇವೆ ಮಾಡಿದ್ದಾರೆ. ದಾವಣಗೆರೆ ನಗರದ ಸಾಮಾಜಿಕ, ಧಾರ್ಮಿಕ ಹಾಗೂ ಕಲಾ ಕ್ಷೇತ್ರದ ಬೆಳವಣಿಗೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಇಲ್ಲಿನ ಸೋಮೇಶ್ವರ ದೇವಾಲಯ, ಕಲಾಕ್ಷೇತ್ರ ಹಾಗೂ ಶಂಕರ ಲೀಲಾ ಕಲ್ಯಾಣ ಮಂಟಪಗಳು ಅವರ ಕೊಡುಗೆಗಳು, ಸಾವಿರಾರು ಕಲಾವಿದರಿಗೆ ಅವರು ಪ್ರೇರಣೆಯಾಗಿದ್ದಾರೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಮಾತನಾಡಿ, ವೃತ್ತಿ ರಂಗಭೂಮಿ ಕಲಾವಿದರು ಇಂದು ಸಂಕಷ್ಟದಲ್ಲಿದ್ದಾರೆ. ನಗರಕ್ಕೆ ಬಂದು, ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ವೃತ್ತಿ ರಂಗಭೂಮಿ ಕಛೇರಿ ತೆರೆದ ಬಳಿಕ ಕಲಾವಿದರ ಕಷ್ಟಗಳು ಅರಿವಿಗೆ ಬರುತ್ತಿವೆ. ಈ ಕುರಿತಂತೆ ಮೇಲಾಧಿಕಾರಿಗಳ ಪತ್ರ ಬರೆದಿದ್ದು, ಕಲಾವಿದರ ಸಂಕಷ್ಟಕ್ಕೆ ಸ್ಪಂದಿಸುವಂತೆ ಮನವಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಬಳಿಕ ಕುಮಾರ ನಾಟಕ ಸಂಘದ ಕಲಾವಿದರಿಂದ 'ನಕ್ಕೀತು ಅರಮನೆ ನಕ್ಕೀತು ಸೆರೆಮನೆ' ನಾಟಕ ಪ್ರದರ್ಶನ ನಡೆಯಿತು. ಶ್ರೀ ಕುಮಾರ ನಾಟಕ ಸಂಘದ ಮಾಲೀಕ ಜಾಲ್ಯಾಳ ಮಂಜುನಾಥ್, ಹಿರಿಯ ಕಲಾವಿದ, ಚಿತ್ರ ನಿರ್ದೇಶಕ ಚಿಂದೋಡಿ ಬಂಗಾರೇಶ್, ಚಿಂದೋಡಿ ಮಧುಕೇಶ್, ಚಿಂದೋಡಿ ವೀರಶಂಕರ್, ಚಿಂದೋಡಿ ಎಲ್. ಚಂದ್ರಧರ್, ಜ್ಞಾನೇಶ್ವರ ಜವಳಿ, ಚಿಂದೋಡಿ ಜಯಪ್ರಕಾಶ್ ಮತ್ತಿತರರಿದ್ದರು

### ಕಲಾವಿದರಿಗೆ ಸಹಕಾರ

**ಕರ್ನಾಟಕದಲ್ಲಿ ನಾಟಕ ಕಂಪನಿ ಎಂದರೆ ಗುಬ್ಬಿ ವೀರಣ್ಣನವರ ಕಂಪನಿಯ ಹೆಸರೇ ಕೇಳಿ ಬರುತ್ತದೆ. ಆದರೆ, ನಮ್ಮ ದಾವಣಗೆರೆಯಲ್ಲೇ ಹುಟ್ಟಿ ಬೆಳೆದಿರುವ ಕೆಬಿಆರ್ ನಾಟಕ ಕಂಪನಿ, ಗುಬ್ಬಿ ಕಂಪನಿಗೆ ಯಾವುದರಲ್ಲೂ ಕಡಿಮೆ ಇಲ್ಲ. ಅಷ್ಟೊಂದು ಭವ್ಯ ಇತಿಹಾಸ ನಗರದ ರಂಗಭೂಮಿಗೆ ಇದೆ. ಈ ಭವ್ಯತೆ ಉಳಿಸಿಕೊಂಡು ಹೋಗುವ ನಿಟ್ಟಿನಲ್ಲಿ ಇಲಾಖೆಯು ವೃತ್ತಿ ರಂಗಭೂಮಿ ಕಲಾವಿದರಿಗೆ ಸಹಕಾರ ನೀಡಲಿದೆ ಎಂದು ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದರು.**

# ಸರ್ಕಾರಿ ಶಾಲೆಗಳ ಬಗ್ಗೆ ಉದಾಸೀನ ಬೇಡ

## ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣಾ ಸಮಾರಂಭದಲ್ಲಿ ಶಾಸಕ ರಾಮಪ್ಪ ಕಳಕಳಿ



ಮಲೇಬೆನ್ನೂರು, ಜ.27- ಶಾಲೆಗಳು ದೇವಸ್ಥಾನಗಳಿದ್ದಂತೆ, ದೇವಸ್ಥಾನಗಳಂತೆ ಇಲ್ಲಿಯೂ ಸ್ವಚ್ಛತೆ, ಭಯ- ಭಕ್ತಿ ಇರಬೇಕು ಎಂದು ಶಾಸಕ ಎಸ್. ರಾಮಪ್ಪ ಅವರು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ಸರ್ಕಾರದ ಸಮವಸ್ತ್ರಗಳನ್ನು ಮತ್ತು ಬೆಂಗಳೂರಿನ ಮಾರುತಿ ಮೆಡಿಕಲ್ಸ್ ನ ಮಹೇಂದ್ರ ಮುಣೋತ ಅವರು ಕೊಡುಗೆಯಾಗಿ ನೀಡಲಾಗಿದ್ದ ನೋಟ್ ಬುಕ್ ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿ ಶಾಸಕರು ಮಾತನಾಡಿದರು.

ಸರ್ಕಾರಿ ಶಾಲೆಗಳೆಂದರೆ ಅಸಡ್ಡೆ, ಉದಾಸೀನವನ್ನು ಯಾರೂ ಮಾಡಬಾರದು, ಇದು ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ದೇಗುಲವಿದ್ದಂತೆ, ಇದನ್ನು ನೀವು- ನಾವೆಲ್ಲರೂ ಸೇರಿ ನಮ್ಮ ಮನೆಯಂತೆ ಜವಾಬ್ದಾರಿಯಿಂದ ನೋಡಿಕೊಳ್ಳಬೇಕಾಗಿದೆ ಎಂದರು.

ವಿದ್ಯಾರ್ಥಿಗಳೂ ಸಹ ಪೋಷಕರ, ಶಿಕ್ಷಕರ ಮತ್ತು ಸರ್ಕಾರದ ಶ್ರಮವನ್ನು ಅರ್ಥಮಾಡಿಕೊಂಡು ಚನ್ನಾಗಿ ಓದಿ ಶಾಲೆಗೆ, ಊರಿಗೆ, ಶಿಕ್ಷಕರಿಗೆ ಮತ್ತು ಪೋಷಕರಿಗೆ ಕೀರ್ತಿ ತರಬೇಕೆಂದು ಶಾಸಕ ರಾಮಪ್ಪ ಹುರಿದುಂಬಿಸಿದರು.

ಶಾಲೆಗೆ ಅವಶ್ಯವಿರುವ ಶೌಚಾಲಯ, ಕಾಂಪೌಂಡ್ ಹಾಗು ಶುದ್ಧ ನೀರಿನ ಘಟಕವನ್ನು ಶೀಘ್ರದಲ್ಲಿಯೇ ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದ ಶಾಸಕರು, ಪಾಳು ಬಿದ್ದಿರುವ ಬಾಪೂಜಿ ಹಾಲ್ ಅನ್ನು ಕೆಡವಿ ಹೊಸ ಕಟ್ಟಡ ನಿರ್ಮಿಸಿ, ಅದಕ್ಕೆ ಭವನ ಎಂಬ ಹೆಸರಿಟ್ಟು ಹೈಟೆಕ್ ಗ್ರಂಥಾಲಯ ಸೇರಿದಂತೆ, ವಿವಿಧ ಕಚೇರಿಗಳಿಗೆ ಅವಕಾಶ ನೀಡುವ ಕುರಿತು ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದರು.

ಎಸ್.ಡಿ.ಎಂ.ಸಿ ಅಧ್ಯಕ್ಷ ಅಬು ಸಾಲೇಹ ಅಧ್ಯಕ್ಷತೆ ವಹಿಸಿದ್ದರು. ಪುರಸಭೆ ಮುಖ್ಯಾಧಿಕಾರಿ ರುಕ್ಮಿಣಿ, ಎಸ್.ಡಿ.ಎಂ.ಸಿ ಸದಸ್ಯರಾದ ಆಸಿಫ್ ಅಲಿ, ಎಂ.ಬಿ.ರುಸ್ತುಂ, ಓ.ಜಿ.ಮಂಜು, ಚಂದ್ರಮ್ಮ ಪೂಜಾರ್ ಬೀರಪ್ಪ, ಕಾಲೇಜಿನ ಉಪಾಧ್ಯಕ್ಷ ಮೀರ್ ಅಜಾಂ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಪುರಸಭೆ ಸದಸ್ಯರಾದ ಸಾಬೀರ್ ಅಲಿ, ಭೋವಿ ಶಿವು, ಕೆ.ಪಿ.ಗಂಗಾಧರ್, ವರ್ತಕ ನಯಾಜ್, ಪಿ.ಹೆಚ್.ಶಿವಕುಮಾರ್, ಕುಂಬಳೂರಿನ ಎಂ.ವಾಸುದೇವ ಮೂರ್ತಿ, ಹಾಲಿವಾಣದ ರೇವಣಸಿದ್ದಪ್ಪ, ಕೊಕ್ಕನೂರಿನ ಚಂದ್ರಪ್ಪ, ಕೊಟ್ರೇಶ್ ನಾಯ್ಕ, ಕಾಲೇಜಿನ ಉಪ ಪ್ರಾಚಾರ್ಯ ಹೆಚ್. ಎಸ್. ರಂಗಪ್ಪ ಉಪಸ್ಥಿತರಿದ್ದರು.

ಎಸ್.ಡಿ.ಎಂ.ಸಿ ಸದಸ್ಯ ಹೆಚ್. ಎಂ. ಸದಾನಂದ ಸ್ವಾಗತಿಸಿದರು. ಪ್ರಭಾರ ಮುಖ್ಯ ಶಿಕ್ಷಕ ರಾಮಪ್ಪ ಸೋಮಣ್ಣನವರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ರೇವಣಪ್ಪ ವಂದಿಸಿದರು.

# ಬಳ್ಳೇಶ್ವರ ಗ್ರಾಮದಲ್ಲಿ ನಾಗದೇವತೆ ಪ್ರತಿಷ್ಠಾಪನೆ





ಹೊನ್ನಾಳಿ, ಜ.27- ತಾಲ್ಲೂಕಿನ ಬಳ್ಳೇಶ್ವರ ಗ್ರಾಮದಲ್ಲಿ ನಾಗದೇವತೆಯ ಪ್ರತಿಷ್ಠಾಪನೆಯು ಪೂಜಾ ವಿಧಿ ವಿಧಾನಗಳ ಮೂಲಕ ಇಂದು ಬೆಳಿಗ್ಗೆ ನಡೆಯಿತು.

ಗ್ರಾಮದ ಒಂದೇ ಮನೆತನಕ್ಕೆ ಸೇರಿದ 19 ಕುಟುಂಬದವರಿಂದ ಈ ನಾಗದೇವತೆಯ ಪ್ರತಿಷ್ಠಾಪನಾ ಕಾರ್ಯ ನಡೆದಿದ್ದು ವಿಶೇಷವಾಗಿತ್ತು.

ಉಡುಪಿ ಜಿಲ್ಲಾ ಕಾರ್ಕಳ ತಾಲ್ಲೂಕು ನಲ್ಲಿಕಾರರ 5 ಜನ ಪುರೋಹಿತರ ತಂಡದಿಂದ ಪೂಜಾ ವಿಧಿ - ವಿಧಾನಗಳು 2 ದಿನಗಳಿಂದ ನಡೆದಿದ್ದು, ಇಂದು 105 ನೇ ನಾಗದೇವತೆಯ ಪ್ರತಿಷ್ಠಾಪನಾ ಕಾರ್ಯ ನಡೆದಿದೆ. ಈ ದಿನ 3 ಎಡೆಯ 1 ಕಲ್ಲು,1 ಎಡೆಯ 4 ನಾಗರಕಲ್ಲುಗಳನ್ನು ಸ್ಥಾಪನೆ ಮಾಡಲಾಗಿದೆ.

4 ರಿಂದ 5 ತಲೆಮಾರಿನಷ್ಟು ಹಳೆಯದಾಗಿದ್ದ ನಾಗಪ್ಪನ ಕಲ್ಲುಗಳು ಶಿಥಿಲಗೊಂಡು ಚದುರಿಹೋಗಿದ್ದು, ಕುಟುಂಬದವರಲ್ಲಿ ಭಕ್ತಿ ಹಾಗೂ ಆಸಕ್ತಿ ಮೂಡಿದ್ದು, ಕುಟುಂಬಸ್ಥರಿಗೆ ಸೇರಿದ ಗ್ರಾಮದ ಸರ್ವೇ ನಂಬರ 7 ರಲ್ಲಿನ 5 ಗುಂಟೆಯಲ್ಲಿ ಈ ನಾಗದೇವತೆಯನ್ನು ಸ್ಥಾಪಿಸಲಾಗಿದೆ.

ಕಳೆದ 48 ದಿನಗಳಿಂದಲೂ ಪ್ರತಿಷ್ಠಾಪನಾ ಕಾರ್ಯ ನಡೆಸುತ್ತಾ ಬಂದಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ದೇವಸ್ಥಾನ ಕಟ್ಟಡದ ಜೀರ್ಣೋದ್ಧಾರಕ್ಕೆ ಮುಂದಾಗುವುದಾಗಿ ಹಿರಿಯರು, ಗ್ರಾಮಸ್ಥರು ತಿಳಿಸಿದ್ದಾರೆ. ಇದರೊಂದಿಗೆ ಚೌಡಮ್ಮದೇವಿಯ ಪ್ರತಿಷ್ಠಾಪನೆ ಮಾಡಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ದರ್ಶನ ಪಡೆದರು.

## ಕೋವಿಡ್ ಲಸಿಕೆಗಳಿಗೆ ಸಾಮಾನ್ಯ ಅನುಮತಿ

ನವದೆಹಲಿ, ಜ. 27- ಕೊವಿಶೀಲ್ಡ್ ಹಾಗೂ ಕೊವ್ಯಾಕ್ಸಿನ್ ಲಸಿಕೆಗಳನ್ನು ಸಾಮಾನ್ಯ ಮಾರುಕಟ್ಟೆಯಲ್ಲಿ ವಯಸ್ಕರಿಗೆ ನೀಡಲು ಕೇಂದ್ರ ಔಷಧ ನಿಯಂತ್ರಕರು ಅನುಮತಿ ನೀಡಿದ್ದಾರೆ. ಕೊರೊನಾದ ಲಸಿಕೆಗಳನ್ನು ಇದುವರೆಗೂ ತುರ್ತು ಅನುಮತಿಯ ಮೇಲೆ ನೀಡಲಾಗುತ್ತಿತ್ತು. ಎರಡೂ ಕಂಪನಿಗಳು ಪ್ರಸಕ್ತ ನಡೆಸಲಾಗುತ್ತಿರುವ ಪ್ರಯೋಗಗಳ ವರದಿಗಳನ್ನು ಸಲ್ಲಿಸಬೇಕು. ದೇಶದಲ್ಲಿ ನೀಡಲಾಗುವ ಎಲ್ಲಾ ಲಸಿಕೆಗಳ ವಿವರಗಳನ್ನು ದಾಖಲಿಸುವಂತೆ ಷರತ್ತು ವಿಧಿಸಲಾಗಿದೆ.

## ಹಗಲು ವೇಷಗಾರರಿಗೆ ಕರುನಾಡ ರಾಜ್ಯ ರತ್ನ ಪ್ರಶಸ್ತಿ





ಹರಪನಹಳ್ಳಿ, ಜ.27- ಕೊಪ್ಪಳ ಜಿಲ್ಲೆ ಕಾರಟಗಿ ನಗರದ ಪ್ರಸಾರ ಭಾರತಿ ಸೌಹಾರ್ದ ಟ್ರಸ್ಟ್ ವತಿಯಿಂದ ಇಲ್ಲಿನ ಹಗಲು ವೇಷಗಾರ ತಂದೆ - ಮಗನಿಗೆ ಕರುನಾಡ ಕಲಾ ರತ್ನ ಹಾಗೂ ಕರುನಾಡ ರಾಜ್ಯ ರತ್ನ ಪ್ರಶಸ್ತಿ ನೀಡಲಾಗಿದೆ.

ಪಟ್ಟಣದ ಆದಿ ಬಸವೇಶ್ವರ ಆಸರೆ ಕ್ಯಾಂಪ್‌ನಲ್ಲಿ ವಾಸವಿರುವ ಹಗಲು ವೇಷಗಾರ ಕಲಾವಿದರಾದ ಮೋತಿ ರಾಮಣ್ಣ ಅವರಿಗೆ 'ಕರುನಾಡ ಕಲಾ ರತ್ನ' ಹಾಗೂ ಅವರ ಪುತ್ರ ಮೋತಿ ಮಾರುತಿ ಅವರಿಗೆ 'ಕರುನಾಡ ರಾಜ್ಯ ರತ್ನ' ಪ್ರಶಸ್ತಿ ದೊರಕಿದೆ.

ಇಬ್ಬರೂ ಕಲೆ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ, ಕರುನಾಡ ರತ್ನ ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಆಯ್ಕೆ ಪತ್ರದಲ್ಲಿ ಟ್ರಸ್ಟ್‌ನ ಅಧ್ಯಕ್ಷ ನಾಗರಾಜ ಪೂಜಾರ ಮತ್ತು ಪ್ರಧಾನ ಕಾರ್ಯದರ್ಶಿ ವೈ. ಪ್ರೇಮಾ ತಿಳಿಸಿದ್ದಾರೆ.

ಪ್ರಶಸ್ತಿಗಳನ್ನು ಧಾರವಾಡದ ರಂಗಾಯಣದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಬರುವ ಫೆಬ್ರವರಿ 2 ರಂದು ನೀಡಿ, ಗೌರವಿಸಲಾಗುವುದು ಎಂದು ಹೇಳಲಾಗಿದೆ.

## ನೂತನ ಕ್ರೀಡಾಂಗಣ ಕಾಮಗಾರಿ ವೀಕ್ಷಿಸಿದ ಎಸ್ಸೆಸ್

### ಸುತ್ತ ಕಾಂಪೌಂಡ್ ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚನೆ



ದಾವಣಗೆರೆ, ಜ.27- ದಾವಣಗೆರೆ ದಕ್ಷಿಣ ವಿಧಾನಸಭಾ ವ್ಯಾಪ್ತಿಯ ಶಿವನಗರದಲ್ಲಿ ನೂತನವಾಗಿ ಕ್ರೀಡಾಂಗಣ ನಿರ್ಮಾಣಗೊಳ್ಳುತ್ತಿದ್ದು, ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಇಂದು ಕಾಮಗಾರಿ ವೀಕ್ಷಿಸಿದರು.

ಸುಮಾರು 6 ಎಕರೆ ಪ್ರದೇಶದಲ್ಲಿ ದಾವಣಗೆರೆ ಸ್ಮಾರ್ಟ್‌ಸಿಟಿ ಲಿಮಿಟೆಡ್ ವತಿಯಿಂದ ನಿರ್ಮಾಣಗೊಳ್ಳುತ್ತಿದೆ. ಕಾಮಗಾರಿಯನ್ನು ತ್ವರಿತಗತಿಯಲ್ಲಿ ನಿರ್ಮಿಸಿ ಜೊತೆಗೆ ಕ್ರೀಡಾಂಗಣದ ಸುತ್ತಲೂ ಕಾಂಪೌಂಡ್ ನಿರ್ಮಿಸಬೇಕೆಂದು ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು.

ಕಾಮಗಾರಿಯು ಗುಣಮಟ್ಟದಿಂದ ಕೂಡಿದ್ದು, ತ್ವರಿತವಾಗಿ ಕಾಮಗಾರಿ ನಡೆಸಬೇಕು. ಯಾವುದೇ ರೀತಿಯಲ್ಲಿ ಗುಣಮಟ್ಟದಲ್ಲಿ ರಾಜೀ ಮಾಡಿಕೊಳ್ಳದೇ ಕಾಮಗಾರಿಗಳು ಉತ್ತಮ ರೀತಿಯಲ್ಲಿ ಆಗುವಂತೆ ನೋಡಿಕೊಳ್ಳಬೇಕೆಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರುಗಳಾದ ಎ.ಬಿ.ರಹೀಂ ಸಾಬ್, ಜಾಕೀರ್, ಕಬೀರ್, ಮಾಜಿ ಸದಸ್ಯರಾದ ಶಫೀಕ್ ಪಂಡಿತ್, ಫಾರೂಕ್, ಮುಖಂಡರುಗಳಾದ ಕೊಡಪಾನ ದಾದಾಪೀರ್, ಘನಿ, ಮೊಟ್ಟೆ ದಾದಾಪೀರ್, ದಾವಣಗೆರೆ ಸ್ಮಾರ್ಟ್‌ಸಿಟಿ ಲಿಮಿಟೆಡ್ ನಿರ್ದೇಶಕ ಎಂ.ನಾಗರಾಜ್, ಅಭಿಯಂತರರುಗಳಾದ ರವಿಕುಮಾರ್, ಸಿದ್ದೇಶ್, ವೀರೇಶ್ ಮತ್ತಿತರರಿದ್ದರು.

## ಎಪಿಎಂಸಿಯಲ್ಲಿ ಹಮಾಲಿ ದರ ನಿಗದಿ

ದಾವಣಗೆರೆ, ಜ.27- ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಕ್ಕೆ ಅವಕವಾಗುವ ಪ್ರಮುಖ ಅಧಿಸೂಚಿತ ಉತ್ಪನ್ನಗಳಿಗೆ ಪರಿಷ್ಕೃತ ಹಮಾಲಿ ದರಗಳನ್ನು ನಿಗದಿಪಡಿಸಲಾಗಿದೆ.

ಎಪಿಎಂಸಿ ಅಧ್ಯಕ್ಷ ಎಸ್.ಕೆ ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ಸಭೆಯಲ್ಲಿ ಮೆಕ್ಕೆಜೋಳಕ್ಕೆ 10 ರೂ., ಶೇಂಗಾ, ಭತ್ತ ಮತ್ತು ಸೂರ್ಯಕಾಂತಿಗೆ 12 ರೂ. ನಂತೆ ಹೊಸದಾಗಿ ಹಮಾಲಿ ದರಗಳನ್ನು ನಿಗದಿಪಡಿಸಲಾಗಿದೆ.

ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಸಂದರ್ಭದಲ್ಲಿ, ಮಾರಾಟ ಪೂರ್ವದ ಹಮಾಲಿ ದರಗಳನ್ನು ನೀಡಬೇಕು. ನಂತರದ ಯಾವುದೇ ಅನಧಿಕೃತ ರಿವಾಜುಗಳನ್ನು ನೀಡಬಾರದೆಂದು ಹಾಗೂ ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಇ-ಟೆಂಡರ್ ಮುಖಾಂತರ ಮಾರಾಟ ಮಾಡಿ ಸ್ಪರ್ಧಾತ್ಮಕ ಧಾರಣೆಗಳನ್ನು ಪಡೆಯಲು ತಿಳಿಸಲಾಗಿದೆ.

ಸಭೆಯಲ್ಲಿ ಸಮಿತಿಯ ಉಪಾಧ್ಯಕ್ಷ ಬಿ.ಕೆ.ಈರಣ್ಣ, ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ದಲ್ಲಾಲರ ಸಂಘದ ಅಧ್ಯಕ್ಷ ಕಂಸಾಗರದ ಪಂಚಾಕ್ಷರಪ್ಪ, ವರ್ತಕರ ಪ್ರತಿನಿಧಿ ಆರ್. ಜೆ ರುದ್ರೇಶ್ ಹಾಗೂ ಸಮಿತಿ ಕಾರ್ಯದರ್ಶಿ ಕೆ.ಸಿ ದೊರೆಸ್ವಾಮಿ, ಸಹಾಯಕ ನಿರ್ದೇಶಕ ಜೆ.ಪ್ರಭು ಹಾಜರಿದ್ದರು.

## ಕೊರೊನಾ ಇಳಿಕೆಯ ಆರಂಭಿಕ ಸೂಚನೆ

ನವದೆಹಲಿ, ಜ. 27 – ಕೊರೊನಾ ಪ್ರಕರಣಗಳು ಕಡಿಮೆಯಾಗುವ ಆರಂಭಿಕ ಸೂಚನೆಗಳು ದೊರೆತಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಮಹಾರಾಷ್ಟ್ರ, ಉತ್ತರ ಪ್ರದೇಶ, ದೆಹಲಿ, ಒಡಿಶಾ, ಹರಿಯಾಣ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ಕೊರೊನಾ ಪ್ರಕರಣಗಳು ಇಳಿಮುಖವಾಗಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್, ದೇಶದ ಕೆಲ ಭಾಗಗಳಲ್ಲಿ ಕೊರೊನಾ ಪ್ರಕರಣಗಳು ಇಳಿಕೆಯಾಗುತ್ತಿವೆ. ಈ ಬಗ್ಗೆ ನಿಗಾವಹಿಸಬೇಕಿದೆ ಹಾಗೂ ಮುನ್ನೆಚ್ಚರಿಕೆ ವಹಿಸುವುದನ್ನು ಮುಂದುವರೆಸಬೇಕಿದೆ ಎಂದಿದ್ದಾರೆ.


ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ನನ್ನ ಮಗನಾದ
ಶ್ರೀ ನಾಗರಾಜ ಲಕ್ಷ್ಮಣಸಾ ಬದ್ದಿ
ಜನನ : 30.06.1957 ಮರಣ : 17.01.2022
(ಮಾಲೀಕರು, ಓಂ ಸ್ಯಾರಿ ಸೆಂಟರ್ ದಾವಣಗೆರೆ)
ಇವರು ಸೋಮವಾರ ದಿ. : 17.01.2022 ರಂದು ರಾತ್ರಿ 11.10ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅದರ ಪ್ರಯುಕ್ತ
'ವೈಕುಂಠ ಸಮಾರಾಧನೆ' ಯನ್ನು
ದಿನಾಂಕ : 28.01.2022 ರ ಶುಕ್ರವಾರ ಮಧ್ಯಾಹ್ನ 12.30 ಕ್ಕೆ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ನಿಶ್ಚಯಿಸಿರುತ್ತೇವೆ.
ತಾವುಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ತಾಯಿ : ಶ್ರೀಮತಿ ಕೃಷ್ಣಬಾಯಿ ಲಕ್ಷ್ಮಣಸಾ ಬದ್ದಿ ಪತ್ನಿ : ಶ್ರೀಮತಿ ನಾಗರತ್ನ ನಾಗರಾಜ ಬದ್ದಿ
ಸಹೋದರರು, ಸೊಸೆಯಂದಿರು, ಸಹೋದರಿಯರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಬದ್ದಿ ಕುಟುಂಬದವರು ಹಾಗೂ ಬಂಧು-ಬಳಗದವರು
ವಿಳಾಸ : 2035/201, ಅನ್ನಪೂರ್ಣೇಶ್ವರಿ ನಿಲಯ, ಜೀವ ಆಸ್ಪತ್ರೆ ಹತ್ತಿರ, 13ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ. ಮೊ. : 97434 47706





ದಾವಣಗೆರೆ ಮಹಾನಗರ ಪಾಲಿಕೆಯ ಮಹಾತ್ಮಗಾಂಧಿ ವಿಕಾಸ ಯೋಜನೆಯಡಿ ವಿವಿಧ ಕಾಮಗಾರಿಗಳ ಭೂಮಿ ಪೂಜೆ ಸಮಾರಂಭ
ವಾರ್ಡ್ ನಂ. 20 ಮತ್ತು 21



ವಾರ್ಡ್ ನಂ.20

ವಾರ್ಡ್ ನಂ.20 ಭಾರತ್ ಕಾಲೋನಿ 7ನೇ ಕ್ರಾಸ್‌ನ ದೇವಸ್ಥಾನದಿಂದ ತಿಪ್ಪೇಶಪ್ಪನವರ ಮನೆಯವರೆಗೆ ಸಿ.ಸಿ.ಚರಂಡಿ ಕವರಿಂಗ್ ಸ್ಲ್ಯಾಬ್ ಮತ್ತು ಡೆಕ್ ಸ್ಲ್ಯಾಬ್ ನಿರ್ಮಾಣ ಹಾಗೂ 13ನೇ ಕ್ರಾಸ್ ಅಡ್ಡ ರಸ್ತೆಯಿಂದ 8ನೇ ಕ್ರಾಸ್ ಪ್ರಕಾಶ್ ಮನೆಯವರೆಗೆ ಎರಡೂ ಬದಿ ಚರಂಡಿ ಹಾಗೂ ಕವರಿಂಗ್ ಸ್ಲ್ಯಾಬ್ ನಿರ್ಮಾಣ ಹಾಗೂ ಅಣ್ಣಾನಗರದ ವಿವಿಧ ಕ್ರಾಸ್‌ನಲ್ಲಿ ಎರಡು ಬದಿಯಲ್ಲಿ ಸಿ.ಸಿ. ಚರಂಡಿ ಮತ್ತು ಕವರಿಂಗ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ



ಶ್ರೀಮತಿ ಮೀನಾಕ್ಷಿ ಜಗದೀಶ್
ಮಹಾನಗರ ಪಾಲಿಕೆ ಸದಸ್ಯರು
20ನೇ ವಾರ್ಡ್, ಭಾರತ್ ಕಾಲೋನಿ,

ಅಂದಾಜು ಮೊತ್ತ: 50 ಲಕ್ಷಗಳು
ದಿನಾಂಕ: 28.01.2022.
ಸ್ಥಳ: ಭಾರತ್‌ಕಾಲೋನಿ 13ನೇ ಕ್ರಾಸ್, ಶಾರದ ಮಿಲ್ ಹತ್ತಿರ.
ಸಮಯ: ಮಧ್ಯಾಹ್ನ 12.30 ಕ್ಕೆ

ಜಗದೀಶ್
ಕಾಂಗ್ರೆಸ್ ಮುಖಂಡರು
20ನೇ ವಾರ್ಡ್, ಭಾರತ್ ಕಾಲೋನಿ

ವಾರ್ಡ್ ನಂ.21

ವಾರ್ಡ್.ನಂ. 21 ಬಸಾಪುರದ ಹೈಸ್ಕೂಲ್ ಮುಂಭಾಗದಲ್ಲಿ ಬಾಕಿ ಉಳಿದ ಸಿ.ಸಿ.ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತು ಐಗೂರು ರಸ್ತೆ ಮತ್ತು ಬೋರಗನಹಳ್ಳಿ ರಸ್ತೆ ನಡುವಿನ ಆಶ್ರಯ ಕಾಲೋನಿಯಲ್ಲಿನ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಅಣ್ಣಾನಗರದಲ್ಲಿ ಕೊಟ್ರೇಶ್ ಮನೆಯ ಕೇರಿ ಮತ್ತು ರೇವಣಸಿದ್ದೇಶ್ವರ ಮನೆಯ ಕೇರಿಯಲ್ಲಿ ಸಿ.ಸಿ.ಚರಂಡಿ ನಿರ್ಮಾಣ

ಅಂದಾಜು ಮೊತ್ತ: 80 ಲಕ್ಷಗಳು
ದಿನಾಂಕ: 28.01.2022.
ಸ್ಥಳ: ಕೃಷಿ ಪತ್ತಿನ ಸಹಕಾರ ಸಂಘ, ಬಸಾಪುರ
ಸಮಯ: ಮಧ್ಯಾಹ್ನ 1 ಗಂಟೆಗೆ



ಎಂ. ಎಸ್. ಕೊಟ್ರಯ್ಯ
ಕಾಂಗ್ರೆಸ್ ಮುಖಂಡರು
20ನೇ ವಾರ್ಡ್, ಬಸಾಪುರ



ಎಂ.ಕೆ.ಶಿವಲೀಲಾ ಕೊಟ್ರಯ್ಯ
ಮಹಾನಗರ ಪಾಲಿಕೆ ಸದಸ್ಯರು
21ನೇ ವಾರ್ಡ್, ಬಸಾಪುರ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte